PRGI No: KNKAN/26/A1167

ವಿಜಯನಗರ – ಕೊಪ್ಪಳ – ಬಳ್ಳಾರಿ – ರಾಯಚೂರು ಜಿಲ್ಲೆಗಳಲ್ಲಿ ಏಕ ಕಾಲಕ್ಕೆ ಪ್ರಕಟಿತ

# ಹೊಸಪೇಟೆ ನಾಡಿಮಿಡಿತ

HOSAPETE NAADIMIDITHA

KANNADA DAILY NEWS PAPER ವಿಜಯನಗರ ಆವೃತ್ತಿ ಕನ್ನಡ ದಿನಪತ್ರಿಕೆ

POSTAL REG NO : PMG/KA/NK/BLY/05/2026-2028

Vol.–01 Issue–194 15/10/2026 Thursday Rs.02/– E-mail:hosapetenadimidita@gmail.com ಸಂಪುಟ–01ಸಂಚಿಕೆ–194 ಗುರುವಾರ 15/10/2026ಬೆಲೆ ರೂ.02/–

ಸಂಪಾದಕರು : ರಾಮಜಿ ನಾಯ್ಕ್ ಆರ್

ವ್ಯವಸ್ಥಾಪಕ ಸಂಪಾದಕರು : ಬಿ ಹೆಚ್ ಎಸ್ ರಾಜು

ಸಹ ಸಂಪಾದಕರು : ವಿ ಗಾಳೆಪ್ಪ

Editor : Ramjee Naik R

ಸುದ್ದಿ ಜಾಹೀರಾತಿಗಾಗಿ ಸಂಪರ್ಕಿಸಿರಿ

ಮೊ: 9980107729
9845757747
9538367319

## ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಎಸ್‌ಐಆರ್: 30,622 ನೋಟೀಸ್‌ಗಳ ವಿತರಣೆ

### 30,081 ನೋಟೀಸ್‌ಗಳ ವಿಚಾರಣೆ ಪೂರ್ಣ, ವಿವಿಧ ನಮೂನೆಯಲ್ಲಿ 1.97 ಲಕ್ಷ ಅರ್ಜಿಗಳ ಸಲ್ಲಿಕೆ : ಡಿಸಿ

ವಿಜಯನಗರ(ಹೊಸಪೇಟೆ), 14– ಜಿಲ್ಲೆಯಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಒಟ್ಟು 30,622 ನೋಟೀಸ್ ವಿತರಿಸಲಾಗಿದೆ. ಈ ಪೈಕಿ 30,081 ನೋಟೀಸ್‌ಗಳ ಸಂಬಂಧಿಸಿದಂತೆ ವಿಚಾರಣೆ ಪೂರ್ಣಗೊಳಿಸಲಾಗಿದೆ ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ತಿಳಿಸಿದರು.

ಅವರು ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಎಸ್. ಐ. ಆರ್ ಕುರಿತು ಆಯೋಜಿಸಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.



ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಜೂನ್ 15ರಿಂದ ಸೆಪ್ಟೆಂಬರ್ 23 ರವರೆಗೆ ಮತದಾರರ ಪಟ್ಟಿ ಪರಿಷ್ಕರಣೆ ಸಂಬಂಧ ವಿವಿಧ ನಮೂನೆಗಳಲ್ಲಿ ಒಟ್ಟು 1,97,700 ಅರ್ಜಿಗಳು ಸಲ್ಲಿಕೆಯಾಗಿವೆ. ಇವುಗಳಲ್ಲಿ 1,48,593 ಅರ್ಜಿಗಳು ಆಫ್‌ಲೈನ್ ಮೂಲಕ ಹಾಗೂ 49,107 ಅರ್ಜಿಗಳು ಆನ್‌ಲೈನ್ ಮೂಲಕ ಸಲ್ಲಿಕೆಯಾಗಿವೆ.

ನಮೂನೆ– 6ರಲ್ಲಿ 10,046 ಅರ್ಜಿಗಳ ಅಂಗೀಕಾರ ಇದರಡಿ : ಹೊಸ ಮತದಾರರ ನೋಂದಣಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಒಟ್ಟು 11,862 ಅರ್ಜಿಗಳು ಸಲ್ಲಿಕೆಯಾಗಿವೆ. ಈ ಪೈಕಿ 10,046 ಅರ್ಜಿಗಳನ್ನು ಅಂಗೀಕರಿಸಿ ಮತದಾರರ ಪಟ್ಟಿಯಲ್ಲಿ ನವೀಕರಿಸಲಾಗಿದೆ. 1,793 ಅರ್ಜಿಗಳು ತಿರಸ್ಕೃತಗೊಂಡಿದ್ದು, 23 ಅರ್ಜಿಗಳು ಬಾಕಿ ಉಳಿದಿವೆ.

ಫಾರ್ಮ್ 7ರಡಿ 1.49 ಲಕ್ಷ ಅರ್ಜಿಗಳ ವಿಲೇವಾರಿ : ಮತದಾರರ ಪಟ್ಟಿಯಲ್ಲಿನ ಹೆಸರುಗಳ ಅಳಿಸುವಿಕೆ ಹಾಗೂ ಆಕ್ಷೇಪಣೆಗಳಿಗೆ ಸಂಬಂಧಿಸಿದ ಫಾರ್ಮ್ 7ರಡಿ ಒಟ್ಟು 1,50,050 ಅರ್ಜಿಗಳು ಸಲ್ಲಿಕೆಯಾಗಿವೆ. ಇವುಗಳಲ್ಲಿ 1,49,463 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದ್ದು, 586 ಅರ್ಜಿಗಳು ತಿರಸ್ಕೃತಗೊಂಡಿವೆ. ಒಂದು ಅರ್ಜಿ ಮಾತ್ರ ಬಾಕಿ ಉಳಿದಿದೆ.

ಫಾರ್ಮ್ 8ರಲ್ಲಿ 34,205 ಅರ್ಜಿಗಳ ನವೀಕರಣ : ಮತದಾರರ ವಿವರಗಳ ತಿದ್ದುಪಡಿ ಹಾಗೂ ಇತರ ಬದಲಾವಣೆಗಳಿಗೆ ಸಂಬಂಧಿಸಿದ ಫಾರ್ಮ್ 8ರಡಿ 35,781 ಅರ್ಜಿಗಳು ಸಲ್ಲಿಕೆಯಾಗಿವೆ. ಈ ಪೈಕಿ 34,205 ಅರ್ಜಿಗಳನ್ನು ಮತದಾರರ ಪಟ್ಟಿಯಲ್ಲಿ ನವೀಕರಿಸಲಾಗಿದ್ದು, 1,536 ಅರ್ಜಿಗಳು ತಿರಸ್ಕೃತಗೊಳಿಸಲಾಗಿದ್ದು, 40 ಅರ್ಜಿಗಳು ಬಾಕಿ ಉಳಿದಿವೆ.

ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ಮುಂದುವರಿದಿದ್ದು, ಅರ್ಜಿಗಳ ವಿಲೇವಾರಿ ಮತ್ತು ವಿಚಾರಣೆ ಪ್ರಕ್ರಿಯೆಯ ಮೂಲಕ ಮತದಾರರ ಪಟ್ಟಿಯನ್ನು ಪರಿಷ್ಕರಿಸಲಾಗುತ್ತಿದೆ. ಅಕ್ಟೋಬರ್ 27 ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗುವುದು ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ತಿಳಿಸಿದರು.

## ಹೊಸಪೇಟೆಯಲ್ಲಿ ಕಿತ್ತೂರು ರಾಣಿ ಚನ್ನಮ್ಮ ಜ್ಯೋತಿ ರಥಯಾತ್ರೆಗೆ ಅದ್ದೂರಿ ಸ್ವಾಗತ



ಹೊಸಪೇಟೆ,14– ಐತಿಹಾಸಿಕ ಕಿತ್ತೂರು ಉತ್ಸವದ ನಿಮಿತ್ತ ನಾಡಿನ ಹೆಮ್ಮೆಯ ಸ್ವಾತಂತ್ರ್ಯ ಹೋರಾಟಗಾರ್ತಿ ಕಿತ್ತೂರು ರಾಣಿ ಚನ್ನಮ್ಮ ಅವರ ಜ್ಯೋತಿ ರಥಯಾತ್ರೆ ಬುಧವಾರ ಹೊಸಪೇಟೆ ನಗರಕ್ಕೆ ಆಗಮಿಸಿತು.

ನಗರಕ್ಕೆ ಆಗಮಿಸಿದ ಜ್ಯೋತಿ ರಥಕ್ಕೆ ವೀರಶೈವ ಲಿಂಗಾಯತ ಸಮಾಜದ ಮುಖಂಡರು ಹಾಗೂ ಸಾರ್ವಜನಿಕರು ಭವ್ಯ ಸ್ವಾಗತ ಕೋರಿದರು. ಜ್ಯೋತಿ ರಥಕ್ಕೆ ಪೂಜೆ ಸಲ್ಲಿಸಿ ಗೌರವ ನಮನ ಅರ್ಪಿಸಲಾಯಿತು.

ಈ ಸಂದರ್ಭದಲ್ಲಿ ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಗೊಗ್ಗ ಚನ್ನಬಸವರಾಜ್ ಮಾತನಾಡಿ, “ರಾಣಿ ಚನ್ನಮ್ಮ ಅವರು ಬ್ರಿಟಿಷರ ವಿರುದ್ಧ ಧೈರ್ಯದಿಂದ ಹೋರಾಡಿ ದೇಶಕ್ಕೆ ಮಾದರಿಯಾಗಿದ್ದಾರೆ. ಅವರ ಇತಿಹಾಸ ಮತ್ತು ವೀರಾವೇಶದ ಹೋರಾಟದ ನೆನಪುಗಳನ್ನು ಯುವ ಪೀಳಿಗೆಗೆ ತಿಳಿಸಲು ಇಂತಹ ರಥಯಾತ್ರೆಗಳು ಅತ್ಯಂತ ಪ್ರಮುಖ ಪಾತ್ರವಹಿಸುತ್ತವೆ” ಎಂದರು.

ಬಳಿಕ ಜೈಕಾರಗಳೊಂದಿಗೆ ರಥಯಾತ್ರೆಯನ್ನು ಗೌರವಪೂರ್ವಕವಾಗಿ ಮುಂದಿನ ಮಾರ್ಗಕ್ಕೆ ಬೀಳ್ಕೊಡಲಾಯಿತು.

ಕಾರ್ಯಕ್ರಮದಲ್ಲಿ ವೀರಶೈವ ಲಿಂಗಾಯತ ಪಂಚಮಸಾಲಿ ಯುವ ಘಟಕ ರಾಜ್ಯಾಧ್ಯಕ್ಷ ಕಿಚಿಡಿ ಕೊಟ್ರೇಶ್, ಮುಖಂಡರಾದ ನೀಲಕಂಠ ಗೌಡ, ಕೊರಿಶೆಟ್ಟಿ ಲಿಂಗಪ್ಪ, ಮಧುರಚನ್ನಶಾಸ್ತ್ರೀ, ಸಿ.ಲಿಂಗಪ್ಪ, ದೇವರಾಜ್ ಹನುವಳ್, ವೀರೇಶ್ ಸಿದ್ದನಗೌಡ, ವೀರಬಸವ, ಒಪ್ಪತ್ತೆಪ್ಪ, ರೇವಣಸಿದ್ದಪ್ಪ, ಗೌಳಿ ರುದ್ರಪ್ಪ, ಚಂದ್ರಶೇಖರ, ಶಂಭು ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಖಿನ್ನತೆ ಮುಚ್ಚಿಡಬೇಡಿ, ಮುಕ್ತವಾಗಿ ಮಾತನಾಡಿ

### ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಟಿ. ಲಿಂಗರಾಜು

ವಿಜಯನಗರ(ಹೊಸಪೇಟೆ), 14– ದೇಹಕ್ಕೆ ಕಾಯಿಲೆ ಬರುವುದು ಎಷ್ಟು ಸಹಜವೋ, ಮನಸ್ಸಿಗೆ ಆಯಾಸ ಅಥವಾ ಖಿನ್ನತೆ ಬರುವುದು ಕೂಡ ಅಷ್ಟೇ ಸಹಜ. ಇದಕ್ಕೆ ಯಾರೂ ಅಂಜಬೇಕಿಲ್ಲ. ಸಂಕೋಚಪಡದೇ ಮಾತನಾಡಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಟಿ. ಲಿಂಗರಾಜು ಅಭಿಪ್ರಾಯ ವ್ಯಕ್ತಪಡಿಸಿದರು.




ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆರೋಗ್ಯ ಇಲಾಖೆ, ಕಾನೂನು ಸೇವೆಗಳ ಪ್ರಾಧಿಕಾರ, ವಕೀಲರ ಸಂಘ, ವಾರ್ತಾ ಇಲಾಖೆ ಹಾಗೂ ಸಂಕ್ಲಾಪುರದ ಟಿಎಂಎಸ್ ಸೊಸೈಟಿ ಕಾಲೇಜ್ ಆಫ್ ನರ್ಸಿಂಗ್ ಸಹಯೋಗದಲ್ಲಿ ಬುಧವಾರ ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯ ವಿಜಯ ವಿಠಲ ಸಭಾಂಗಣದಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಡಿದರು.

ವಾಸ್ತವ ಅನುಭವಗಳ ಆಲಿಕೆ, ನೈಜ ಧ್ವನಿಗಳು ನೈಜ ಬದಲಾವಣೆ ಎಂಬ ಈ ಬಾರಿಯ ಘೋಷವಾಕ್ಯದಡಿ ವಿಶ್ವ ಮಾನಸಿಕ ದಿನಾಚರಣೆ ಆಯೋಜಿಸಲಾಗಿದೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಎದುರಿಸುತ್ತಿರುವ ಶೈಕ್ಷಣಿಕ ಒತ್ತಡ, ಪರೀಕ್ಷೆಯ ಭಯ, ಭವಿಷ್ಯದ ಚಿಂತೆ ಮತ್ತು ಪೋಷಕರ ನಿರೀಕ್ಷೆಗಳ ಭಾರದ ಬಗ್ಗೆ ತಿಳಿ ಹೇಳಿದ ಅವರು, ಇದರೊಂದಿಗೆ ಸಾಮಾಜಿಕ ಜಾಲತಾಣಗಳ ಅತಿಯಾದ ಬಳಕೆ ಹಾಗೂ ಇತರರೊಂದಿಗೆ ವ್ಯಕ್ತಿಗತ ಹೋಲಿಕೆ ಮಾಡಿಕೊಳ್ಳುವುದರಿಂದ ಯುವಜನತೆಯಲ್ಲಿ ಮಾನಸಿಕ ಒತ್ತಡಗಳು ಹೆಚ್ಚುತ್ತಿವೆ. ಸಮಾಜದಲ್ಲಿ ಮಾನಸಿಕ ಖಿನ್ನತೆಯನ್ನು ಮುಚ್ಚಿಡುವ ಅಥವಾ ಅದ–ಕ್ಕೊಂದು ಕಳಂಕವಾಗಿ ನೋಡುವ ಕೆಟ್ಟ ಪದ್ಧತಿಯನ್ನು ತೊಡೆದುಹಾಕಬೇಕು. ಯಾವುದೇ ಮಾನಸಿಕ ಸಮಸ್ಯೆ ಅಥವಾ ಅತಿ ಒತ್ತಡವೆನಿಸಿದರೆ ಅದನ್ನು ಸ್ನೇಹಿತರು, ತಂದೆ–ತಾಯಿ ಅಥವಾ ಆಪ್ತಸಮಾಲೋಚಕರೊಂದಿಗೆ ಮುಕ್ತವಾಗಿ ಹಂಚಿಕೊಳ್ಳಿ. ಮಾತನಾಡುವುದರಿಂದ ಮನಸ್ಸಿನ ಭಾರ ಅರ್ಧದಷ್ಟು ಕಡಿಮೆಯಾಗುತ್ತದೆ ಎಂದು ಕಿವಿಮಾತು ಹೇಳಿದರು.

ಮನಸ್ಸಿನ ಸ್ಥೈರ್ಯಕ್ಕಾಗಿ ನಿತ್ಯದ ಜೀವನದಲ್ಲಿ ಯೋಗ, ಧ್ಯಾನ, ದೈಹಿಕ ವ್ಯಾಯಾಮ ಹಾಗೂ ಒಳ್ಳೆಯ ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕು. ರಾತ್ರಿ ವೇಳೆ ಮೊಬೈಲ್ ಬಳಕೆ ಕಡಿಮೆ ಮಾಡಿ ಸಮರ್ಪಕ ನಿದ್ರೆ ಮಾಡುವುದು ಮೆದುಳಿನ ಆರೋಗ್ಯಕ್ಕೆ ಅತ್ಯಾವಶ್ಯಕ ಎಂದರು. ಆರೋಗ್ಯ ಇಲಾಖೆಯು ಮಾನಸಿಕ ಆರೋಗ್ಯ ರಕ್ಷಣೆಗಾಗಿ ಸದಾ ಸಿದ್ಧವಿದ್ದು, ಜಿಲ್ಲಾ ಮಟ್ಟದಲ್ಲಿ ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಮಾನಸಿಕ ಆರೋಗ್ಯ ಬೆಂಬಲಕ್ಕಾಗಿ ‘ಟೆಲಿ–ಮಾನಸ್’ ನಂತಹ ಉಚಿತ ಹೆಲ್ಪ್‌ಲೈನ್ ಸೇವೆಗಳು ಲಭ್ಯವಿವೆ. ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಬದುಕಿ, ಜೀವನದ ಪ್ರತಿ ಸವಾಲನ್ನು ಧೈರ್ಯವಾಗಿ ಎದುರಿಸಿ ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಜೆಎಂ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎನ್. ಸುಬ್ರಹ್ಮಣ್ಯ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶ ಪ್ರಶಾಂತ ನಾಗಲಾಪುರ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಗುಜ್ಜಲ್ ನಾಗರಾಜ, ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿ ಡಾ. ರಾಧಿಕಾ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ ಸೇರಿದಂತೆ ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳು ಮತ್ತಿತರರು ಉಪಸ್ಥಿತರಿದ್ದರು.

## ಕಬ್ಬಿಗೆ 5500 ರೂ. ಬೆಲೆ ನಿಗದಿಗೆ ಆಗ್ರಹಿಸಿ ರೈತ ಸಂಘದಿಂದ ಪ್ರತಿಭಟನೆ




ಹೊಸಪೇಟೆ,14– ಪ್ರತಿ ಟನ್ ಕಬ್ಬಿಗೆ 5500 ರೂ. ಬೆಲೆ ನಿಗದಿಪಡಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ (ವಾಸುದೇವ ಮೇಟಿ ಬಣ) ನೂರಾರು ಕಾರ್ಯಕರ್ತರು ಬುಧವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿ, ಡಿಸಿ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಈ ವೇಳೆ ರೈತ ಸಂಘದ ಜಿಲ್ಲಾಧ್ಯಕ್ಷ ಸಿ.ಎ. ಗಾಳೆಪ್ಪ ಮಾತನಾಡಿ, “ಅಕ್ಕಿ, ಬೇಳೆ, ಸಕ್ಕರೆ, ಪೆಟ್ರೋಲ್, ಡೀಸೆಲ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೇರಿವೆ. ಈಗ ಟನ್ ಕಬ್ಬಿಗೆ ನಿಗದಿ ಮಾಡಿರುವ ಹಣ ಯಾವುದಕ್ಕೂ ಸಾಲುತ್ತಿಲ್ಲ. ಪ್ರತಿಯೊಂದಕ್ಕೂ ಬೆಲೆ ನಿಗದಿ ಇದೆ. ಆದರೆ ರೈತರು ಬೆಳೆದ ಬೆಳೆಗಳಿಗೆ ಮಾತ್ರ ನಿಗದಿ ಬೆಲೆ ಇಲ್ಲ. ಹೀಗಾಗಿ ಪ್ರತಿ ಟನ್ ಕಬ್ಬಿಗೆ 5500 ರೂ. ನಿಗದಿ ಮಾಡಬೇಕು” ಎಂದು ಒತ್ತಾಯಿಸಿದರು.

“ರೈತರು ದೇಶದ ಬೆನ್ನೆಲುಬು ಎನ್ನುವ ರಾಜಕಾರಣಿಗಳು ರೈತರ ಬೆನ್ನೆಲುಬು ಮುರಿಯುವ ಕೆಲಸ ಮಾಡುತ್ತಿದ್ದಾರೆ. ರೈತರಿಗಾಗಿ ಪಾದಯಾತ್ರೆ ಮಾಡದೆ ಕೇವಲ ತಮ್ಮ ಸ್ವಾರ್ಥಕ್ಕಾಗಿ ಪಾದಯಾತ್ರೆ ಮಾಡುತ್ತಿರುವುದು ನಾಚಿಕೆಗೇಡಿನ ಸಂಗತಿ” ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಕಾರ್ಯದರ್ಶಿ ವೆಂಕಟೇಶ್, ತಾಲೂಕು ಅಧ್ಯಕ್ಷ ಮಾಳಿಗಿ ಮಂಜುನಾಥ್, ಸಿ.ರೇಖಾ, ರಮೇಶ್, ಕಲಾವತಿ, ಬಸಪ್ಪ, ಕೆಂಚಪ್ಪ, ದುರುಗಪ್ಪ, ಪರಶುರಾಮ, ಪ್ರಭು ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಹಂಪಿ ತಲುಪಿದ ಭಾರತ ಸ್ವಸ್ತಿಕ ಯಾತ್ರೆ

## ಕಿಷ್ಕಿಂದೆಯ ಪವಿತ್ರ ಭೂಮಿಯಲ್ಲಿ ಮೊರಾರಿ ಬಾಪು ಅವರ ರಾಮಕಥೆ ಅನಾವರಣ

ಹಂಪಿ, 14– ಪೂಜ್ಯ ಮೊರಾರಿ ಬಾಪು ಅವರು ದೇಶಾದ್ಯಂತ ಕೈಗೊಂಡಿರುವ ಆಧ್ಯಾತ್ಮಿಕ ಮಹತ್ವದ ಭಾರತ ಸ್ವಸ್ತಿಕ ಯಾತ್ರೆ ಕರ್ನಾಟಕದ ಹಂಪಿಯನ್ನು ತಲುಪಿದೆ, ರಾಮಾಯಣದ ಜೊತೆಗೆ ಅವಿನಾಭಾವ ಸಂಬಂಧ ಹೊಂದಿರುವ ಪುರಾತನ ಕಿಷ್ಕಿಂದೆಯ ಪರಿಸರಕ್ಕೆ ಈ ಯಾತ್ರೆಯು ಆಗಮಿಸಿರುವುದು ವಿಶೇಷ ಅನುಭೂತಿಯನ್ನು ನೀಡಿದೆ. ಕನ್ಯಾಕುಮಾರಿಯಿಂದ ಕೇದಾರನಾಥಕ್ಕೆ ಸಾಗುತ್ತಿರುವ ಯಾತ್ರೆಯ ಮೊದಲ ಹಂತದಲ್ಲಿ ಹಂಪಿಯಲ್ಲಿ ತಂಗಿ ರಾಮಕಥೆಯನ್ನು ಸಾರಿದ್ದು ಅತ್ಯಂತ ಮಹತ್ವದ ಸಂಗತಿಯಾಗಿದೆ.

ತುಂಗಭದ್ರಾ ತಟದಲ್ಲಿ ಹರಡಿರುವ ಹಂಪಿ, ವಿಜಯನಗರ ಸಾಮ್ರಾಜ್ಯದ ಅವಶೇಷಗಳಿಂದ ಜಗತ್ಪ್ರಸಿದ್ಧವಾದ ಪಾರಂಪರಿಕ ತಾಣವೂ ಆಗಿದೆ, ಜೊತೆಗೆ ಈ ಸ್ಥಳವು ಸನಾತನ ಸಂಸ್ಕೃತಿಯನ್ನು ಎತ್ತಿ ಹಿಡಿದ ಅಪೂರ್ವ ನೆಲೆಯಾಗಿದೆ. ಕಿಷ್ಕಿಂದೆ ಎಂದು ಪಾರಂಪರಿಕವಾಗಿ ಗುರುತಿಸಿಕೊಂಡಿರುವ ಈ ವಿಶಾಲ ಪ್ರದೇಶವು, ಶ್ರೀರಾಮನ ಅನುಯಾಯಿಗಳಾಗಿ ಸೀತಾನ್ವೇಷಣೆಯಲ್ಲಿ, ಸೇತು ಬಂಧದಲ್ಲಿ ಮತ್ತು ಲಂಕೆಯ ಯುದ್ಧದಲ್ಲಿ ಕೈಂಕರ್ಯ ಮಾಡಿದ ವಾನರ ಸಾಮ್ರಾಜ್ಯದ ಹೃದಯವಾಗಿದೆ. ಶ್ರೀರಾಮ, ಲಕ್ಷ್ಮಣ, ಹನೂಮಂತ, ಸುಗ್ರೀವ ಮತ್ತು ವಾಲಿ ಮುಂತಾದವರ ಬಾಂಧವ್ಯದ ಪ್ರತೀಕವಾಗಿದೆ.

ರಾಮಾಯಣದ ನಂಟು: ಭಕ್ತಜನರಿಗೆ, ರಾಮಾಯಣದ ಜೊತೆಗೆ ಹಲವು ವಿಧಗಳಲ್ಲಿ ಸಂಬಂಧವನ್ನು ಹೊಂದಿರುವ ಹಂಪಿ ಮತ್ತು ಸುತ್ತಲಿನ ಸ್ಥಳಗಳು ಅತ್ಯಂತ ಪವಿತ್ರವಾಗಿವೆ. ಅಂಜನಾದ್ರಿ ಪರ್ವತವು ಹನೂಮಂತನ ಜನ್ಮಸ್ಥಳವಾಗಿದ್ದರೆ, ಪಂಪಾ ಸರೋವರವು ಶಬರಿಯ ಅನನ್ಯ ಭಕ್ತಿಗೆ, ಮತ್ತು ಶ್ರೀರಾಮನು ದರ್ಶನ ನೀಡಿ, ಆಕೆಯನ್ನು ಪಾವನಗೊಳಿಸಿರುವುದಕ್ಕೆ ಸಾಕ್ಷಿಯಾಗಿದೆ. ಋಷಿಮುಖ ಪರ್ವತವು ಸುಗ್ರೀವನ ನೆಲೆಯಾಗಿದ್ದು, ರಾಮನು ಹನೂಮಂತನ ಮೂಲಕ ಅವರನ್ನು ಸಂಧಿಸಿದ್ದು ಇಲ್ಲಿಯೇ. ರಾಮ ▯ ಲಕ್ಷ್ಮಣ–ರು ಸೀತಾನ್ವೇಷಣೆಯಲ್ಲಿ ತೊಡಗಿದ್ದಾಗ ಮಾಲ್ಯವಂತದಲ್ಲಿ ಮುಂಗಾರು ಅವಧಿಯನ್ನು ಕಳೆದರೆಂದು ಪ್ರತೀತಿ, ಇದು ಕೂಡ ರಾಮಾಯಣದ ವಿವರಣೆಯಲ್ಲಿ ಕಿಷ್ಕಿಂದೆಯನ್ನು ಸಂಪರ್ಕಿಸುವ ಮತ್ತೊಂದು ಕೊಂಡಿಯಾಗಿದೆ.

ಶ್ರೀರಾಮನ ಕಥೆಗಳನ್ನು ಪವಿತ್ರ ಸಂಪ್ರದಾಯಗಳು, ದೇವಾಲಯಗಳು ಮತ್ತು ಯಾತ್ರಾ ಸ್ಥಳಗಳ ಮೂಲಕ ಸಂರಕ್ಷಿಸಿರುವ, ಐತಿಹಾಸಿಕ ಮತ್ತು ಪೌರಾಣಿಕ ಸಂಗತಿಗಳು ಆಳವಾಗಿ ಬೇರೂರಿರುವ ಹಂಪಿಯಲ್ಲಿ ಮೊರಾರಿ ಬಾಪು ಅವರ ರಾಮಕಥೆಯ ಆಯೋಜನೆಯಾಗಿದ್ದು, ರಾಮಚರಿತಮಾನಸದ ಸಾರ್ವಕಾಲಿಕ ನಿರೂಪಣೆಯನ್ನು ಜನರಿಗೆ ಪ್ರಸ್ತುತಪಡಿಸುತ್ತಿದೆ.

ದರ್ಶನ ದ್ವಾದಶಿ: “ಕರ್ನಾಟಕದ ಹಂಪಿಯಲ್ಲಿಂದು ಮೊರಾರಿ ಬಾಪು ಅವರು ಮಂಗಲ ದರ್ಶನದ ಹನ್ನೆರಡು ಪವಿತ್ರ ದರ್ಶನಗಳನ್ನು ವಿವರಿಸಿದರು. ಇವುಗಳನ್ನು ದರ್ಶನ ದ್ವಾದಶಿ ಎಂದೂ ಕರೆಯುತ್ತಾರೆ. ಇವುಗಳಲ್ಲಿ ಮೊದಲನೆಯದು ಮಾನಸ ದರ್ಶನ, ಮನಸ್ಸನ್ನು ಸ್ವಸ್ತಿಕಕ್ಕೆ ಹೋಲಿಸುತ್ತಾರೆಯ ಬಳಿಕ ಗೋ, ಯತಿ ದರ್ಶನ. ಯತಿಯ ಸ್ವಭಾವವೂ ಗೋವಿನಂತೆ ಸಾಧುವಾಗಿರುತ್ತದೆ, ಅವರು ಕೊಡುವ ಗುಣವನ್ನೇ ಹೊಂದಿರುತ್ತಾರೆ, ಇದಾದ ಮೇಲೆ ನಮ್ಮ ದೇಶದ ದರ್ಶನ. ಬಾರತದ ಕಣ್ಣಿನಿಂದ ನಾವು ಜಗತ್ತನ್ನು ನೋಡಿದಾಗ, ಆ ನೋಟಕ್ಕೊಂದು ವಿಶೇಷ ಅರ್ಥ ಪ್ರಾಪ್ತವಾಗುತ್ತದೆ. ಈ ಪಯಣವು ಆಮೇಲೆ ಅಂತರಂಗದತ್ತ ಸಾಗುತ್ತದೆ, ಇದೇ ನಿಜದರ್ಶನವಾಗುತ್ತದೆ, ಇದನ್ನೇ ಆತ್ಮ ಸಾಕ್ಷಾತ್ಕಾರ ಎನ್ನುತ್ತಾರೆ. ಮುಂದೆ ದೇವ ದರ್ಶನ, ಬ್ರಹ್ಮ ದರ್ಶನ, ಪ್ರಕೃತಿ ದರ್ಶನ, ಪರಸ್ಪರ ಶುಭ ದರ್ಶನ, ತತ್ವ ದರ್ಶನ ಮತ್ತು, ಅಂತಿಮವಾಗಿ ಸಮಾಧಿ ದರ್ಶನ ಪ್ರಾಪ್ತವಾಗುತ್ತದೆ.

ಅರಿ ಷಡ್ವರ್ಗಗಳಿಂದ ಮುಕ್ತರಾದವರೇ ಪವಿತ್ರ ಸೇವಕರಾಗುತ್ತಾರೆ. ಈ ಎಲ್ಲ ಕಶ್ಮಲಗಳು ನಿವಾರಣೆಯಾದಾಗ, ಉಳಿದಿರುವ ಅವಕಾಶವು ಪವಿತ್ರವಾಗಿರುತ್ತದೆ▯ ಶುದ್ಧವಾಗುತ್ತದೆ. ಮಂಗಳಕರವಾದ ಪಯಣವು ಅಂತಿಮವಾಗಿ ಆತ್ಮ ಶುದ್ಧೀಕರಣದ ಕಡೆಗಿನ ಪಯಣವೂ ಆಗಿರುತ್ತದೆ. ಸತ್ಯಧಾಮದ ಜೊತೆಗೆ ನಿರಂತರವಾಗಿ ಅನುಸಂಧಾನ ಮಾಡುವ ವ್ಯಕ್ತಿಯೇ ಸರ್ವಜ್ಞನಾಗುತ್ತಾನೆ ಸಕಲ ಜ್ಞಾನ ಹಾಗೂ ಬುದ್ಧಿಯು ಅವನಿಗೆ ಪ್ರಾಪ್ತವಾಗುತ್ತದೆ. ಸ್ವಸ್ತಿಕದ ಹನ್ನೆರಡು ಮಂಗಳಕರ ದರ್ಶನಗಳು ನಮ್ಮಲ್ಲಿ ಪಾವಿತ್ರ್ಯ, ಸಾಮರಸ್ಯ ಮತ್ತು ವಿಶ್ವ ಕಲ್ಯಾಣದ ಭಾವನೆಯನ್ನು ಜಾಗೃತಗೊಳಿಸಲಿ. ಇದು ಸ್ವಸ್ತಿಕದ ಆಂತರ್ಯದಲ್ಲಿ ಹುದುಗಿರುವ ಮಂಗಲವೂ ನಮ್ಮ ಭಾರತ ಸ್ವಸ್ತಿಕ ಯಾತ್ರೆಯ ಸಾರವೂ ಆಗಿದೆ” ಎಂಬ ಸಂದೇಶವನ್ನು ಮೊರಾರಿ ಬಾಪು ಅವರು ಸಾರಿದರು.



ಐತಿಹಾಸಿಕ, ಪೌರಾಣಿಕ ಕೊಂಡಿ: ಹಂಪಿಯು ಭಾರತದ ನಾಗರಿಕತೆಯ ಇತಿಹಾಸದಲ್ಲಿ ಒಂದು ಪ್ರಮುಖ ಅಧ್ಯಾಯವಾಗಿದೆ. ಈ ನಗರವು ವಿಜಯ ನಗರ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ದೇವಸ್ಥಾನಗಳ ಸಂಸ್ಕೃತಿ, ಸಾಹಿತ್ಯ, ತತ್ವಶಾಸ್ತ್ರ, ಕಲೆ ಮತ್ತು ವಾಣಿಜ್ಯ ಕೇಂದ್ರವೂ ಆಗಿತ್ತು. ಇಲ್ಲಿನ ವಿರೂಪಾಕ್ಷ ದೇವಸ್ಥಾನವು ಶಿವನ ಪವಿತ್ರ ಸನ್ನಿಧಾನವಾಗಿದೆ, ಸಾಂಪ್ರದಾಯಿಕವಾಗಿ ಪಂಪಾ ಮಾತೆಯ ಜೊತೆಗೆ ಸಂಬಂಧವನ್ನು ಹೊಂದಿದೆ, ಮತ್ತು ಇಂದಿಗೂ ದೇವಾರಾಧನೆಯ ಸಕ್ರಿಯ ಕೇಂದ್ರವಾಗಿ ಉಳಿದಿದೆ, ಈ ಮೂಲಕ ಹಂಪಿಯ ಪವಿತ್ರ ಹೆಗ್ಗುರುತನ್ನು ಪ್ರತಿಬಿಂಬಿಸುತ್ತಿದೆ. ವಿಜಯನಗರದ ದೇವಾಲಯಗಳು ಮತ್ತು ಇತರ ನಿರ್ಮಾಣಗಳು 1986 ರಲ್ಲಿ ಮಾಡಿರುವ ಘೋಷಣೆಯಂತೆ ಯುನೆಸ್ಕೋ (ಗಓಇಖಅಔ) ವಿಶ್ವ ಪಾರಂಪರಿಕ ತಾಣವಾಗಿ ಜಗತ್ಪ್ರಸಿದ್ಧವಾಗಿವೆ.

ಹಂಪಿಯಲ್ಲಿ ಭಾರತ ಸ್ವಸ್ತಿಕ ಯಾತ್ರೆಯು ತಂಗಿರುವುದು ಭಾರತದ ಪರಂಪರೆಯ ಎರಡು ಆಯಾಮಗಳನ್ನು ಒಗ್ಗೂಡಿಸುತ್ತಿದೆ▯ ರಾಮಾಯಣಕ್ಕೆ ಸಂಬಂಧಿಸಿ ಇಂದಿಗೂ ಜೀವಂತವಾಗಿರುವ ಆಧ್ಯಾತ್ಮಿಕ ಸಂಪ್ರದಾಯಗಳು ಮತ್ತು ದಕ್ಷಿಣ ಭಾರತದ ಶ್ರೇಷ್ಠ ಸಾಂಸ್ಕೃತಿಕ ಕೇಂದ್ರಗಳಲ್ಲಿ ಒಂದಾಗಿ ಹಂಪಿಯನ್ನು ಕಟ್ಟಿ ಬೆಳೆಸಿದ ಐತಿಹಾಸಿಕ ಪರಂಪರೆ.

ಭಾರತ ಸ್ವಸ್ತಿಕ ಯಾತ್ರೆಯನ್ನು ಪೂಜ್ಯ ಮೊರಾರಿ ಬಾಪು ಅವರ ಮಾರ್ಗದರ್ಶನದಲ್ಲಿ ಸಂತಕೃಪಾ ಸನಾತನ ಸಂಸ್ಥಾನವು ಆಯೋಜಿಸುತ್ತಿದ್ದು, ಭಕ್ತರನ್ನು ಮತ್ತು ವಿವಿಧ ಕ್ಷೇತ್ರಗಳ ಜನರನ್ನು ಒಗ್ಗೂಡಿಸುತ್ತಿದೆ.

ಮಿರಜ್ ಗ್ರೂಪ್‌ನ ಅಧ್ಯಕ್ಷರು ಮತ್ತು ಸಂತಕೃಪಾ ಸನಾತನ ಸಂಸ್ಥಾನದ ಮ್ಯಾನೇಜಿಂಗ್ ಟ್ರಸ್ಟಿ ಆಗಿರುವ ಮದನ್ ಪಲಿವಾಲ್ ಅವರು ಮಾತನಾಡಿ, “ನಮ್ಮ ನಾಗರಿಕತೆಯ ಪರಂಪರೆಯು ಸ್ಮಾರಕಗಳು ಅಥವಾ ಇತಿಹಾಸದ ಪುಸ್ತಕಗಳಿಗೆ ಸೀಮಿತವಾಗಿಲ್ಲ ಎಂಬುದನ್ನು ಹಂಪಿ ನಮಗೆ ಜ್ಞಾಪಿಸುತ್ತದೆ. ಕಥೆಗಳು, ಸಂಪ್ರದಾಯಗಳು ಮತ್ತು ರಾಮ, ಹನೂಮಂತ ಮತ್ತು ಕಿಷ್ಕಿಂದೆಯ ಜೊತೆಗೆ ಸಂಬಂಧ ಹೊಂದಿರುವ ನಂಬಿಕೆಗಳ ಮೂಲಕ ಈ ಪವಿತ್ರ ಭೂಮಿಯು ಜೀವಂತಿಕೆಯನ್ನು ಉಳಿಸಿಕೊಂಡಿದೆ. ಇಲ್ಲಿಗೆ ಭಾರತ ಸ್ವಸ್ತಿಕ ಯಾತ್ರೆಯು ಆಗಮಿಸಿರುವುದು, ಮತ್ತು ಇಲ್ಲಿ ಬಾಪು ಅವರಿಂದ ರಾಮ ಕಥೆಯನ್ನು ಆಲಿಸುವುದು, ಈ ಜೀವಂತ ಪರಂಪರೆಯೊಂದಿಗೆ ಸಂಪರ್ಕ ಸಾಧಿಸಿ, ಅದರ ಮೌಲ್ಯಗಳನ್ನು ಮುಂದಿನ ತಲೆಮಾರುಗಳಿಗೆ ತಲುಪಿಸುವ ಮಹತ್ಕಾರ್ಯವನ್ನು ಸಾಧಿಸಿದೆ” ಎಂದು ನುಡಿದರು.

ದೇಶದ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳನ್ನು ಬೆಸೆಯುವ ಭಾರತ ಸ್ವಸ್ತಿಕ ಯಾತ್ರೆಯ ಪ್ರಯತ್ನದಲ್ಲಿ ಹಂಪಿಯು ಮತ್ತೊಂದು ಮಹತ್ವದ ಹೆಜ್ಜೆಯಾಗಿದೆ. ಸ್ವಸ್ತಿಕ ಮತ್ತು ಅದರೊಂದಿಗೆ ಸಂಬಂಧ ಹೊಂದಿರುವ ಸ್ವಸ್ತಿ ಯೋಗಕ್ಷೇಮ, ಕಲ್ಯಾಣ ಮತ್ತು ಶುಭ ಸಂಗತಿಗಳಿಂದ ಪ್ರೇರಿತವಾದ ಈ ಯಾತ್ರೆಯು ವಿವಿಧ ಪ್ರದೇಶಗಳು ಮತ್ತು ವಿವಿಧ ವರ್ಗಗಳ ಜನರನ್ನು ಒಂದೆಡೆ ಸೇರಿಸುವ ಮೂಲಕ, ಭಾರತದೆಲ್ಲೆಡೆ ಒಂದು ಆಧ್ಯಾತ್ಮಿಕ ಪ್ರಯಾಣವನ್ನು ಅನ್ವೇಷಿಸಲು ಪ್ರಯತ್ನಿಸುತ್ತದೆ.

ಯಾತ್ರೆಯು ನಾಗರಿಕತೆಯ ವಿಶಾಲ ಭೌಗೋಳಿಕ ಪ್ರದೇಶಗಳ ಮೂಲಕ ಸಂಚರಿಸುತ್ತಿದೆ. ಅದರ ಮೊದಲ ಹಂತವು ಅಕ್ಟೋಬರ್ 10ರಂದು ಕನ್ಯಾಕುಮಾರಿಯಲ್ಲಿ ಆರಂಭವಾಗಿದ್ದು, ಅಕ್ಟೋಬರ್ 23ರಂದು ಕೇದಾರನಾಥದಲ್ಲಿ ಸಂಪನ್ನಗೊಳ್ಳಲಿದೆ, ಈ ಮಾರ್ಗದಲ್ಲಿ ಯಾತ್ರೆಯು ದಕ್ಷಿಣ, ಮಧ್ಯ ಮತ್ತು ಉತ್ತರ ಭಾರತದ ಹಲವು ಪ್ರಮುಖ ಆಧ್ಯಾತ್ಮಿಕ – ಸಾಂಸ್ಕೃತಿಕ ಕೇಂದ್ರಗಳನ್ನು ಸಂದರ್ಶಿಸಲಿದೆ. ಈ ಪಯಣವು ವಿಭಿನ್ನ ಸಂಪ್ರದಾಯಗಳನ್ನು ಭಾರತದ ಸಮಗ್ರ ವ್ಯಾಖ್ಯಾನದಲ್ಲಿ ಸಂಗಮಗೊಳಿಸಲಿದೆ. ಯಾತ್ರೆಯ ಎರಡನೇ ಹಂತವು ದ್ವಾರಕೆಯಿಂದ ನವೆಂಬರ್ 14ರಂದು ಆರಂಭವಾಗಿ, ಜಗನ್ನಾಥನ ಸನ್ನಿಧಿ ಪುರಿಯಲ್ಲಿ ನವೆಂಬರ್ 22ರಂದು ಸಮಾಪನಗೊಳ್ಳಲಿದೆ.

ಎರಡು ವಿಶೇಷ ರೈಲುಗಳು, 900 ಭಕ್ತರು : ಸುಮಾರು 9000 ಕಿಮೀ ದೂರವನ್ನು ಕ್ರಮಿಸುವ ಈ ಭಾರತ ಸ್ವಸ್ತಿಕ ಯಾತ್ರೆಯಲ್ಲಿ ಪೂಜ್ಯ ಮೊರಾರಿ ಬಾಪು ಅವರೊಂದಿಗೆ ಎರಡು ವಿಶೇಷ ರೈಲುಗಳಲ್ಲಿ ಸುಮಾರು 900 ಭಕ್ತರು ಸಾಗುತ್ತಿದ್ದಾರೆ▯ ಕೈಲಾಶ್ ಭಾರತ್ ಗೌರವ್ ರೈಲು ಮತ್ತು ಚಿತ್ರಕೂಟ ಭಾರತ್ ಗೌರವ್ ರೈಲುಗಳಲ್ಲಿ ಕ್ರಮವಾಗಿ 22 ಮತ್ತು 16 ಬೋಗಿಗಳಿವೆ. ಭಾರತ ಸ್ವಸ್ತಿಕ ಯಾತ್ರೆಯು ಆಧ್ಯಾತ್ಮಿಕ ಮುಖಂಡರು, ಆಚಾರ್ಯರು, ವಿದ್ವಾಂಸರು, ಉದ್ಯಮಿಗಳು, ಸಮಾಜದ ಮುಖಂಡರು ಮತ್ತು ಸಮುದಾಯದ ಪ್ರತಿನಿಧಿಗಳು ಸೇರಿದಂತೆ ಸಮಾಜದ ವಿವಿಧ ರಂಗಗಳ ಜನರನ್ನು ಒಗ್ಗೂಡಿಸುತ್ತಿದೆ.

‘ಭಂಡಾರ’ದ ಆಯೋಜನೆ : ಸತ್ಯ, ಪ್ರೇಮ ಮತ್ತು ಕರುಣೆ (Truth, Love and Compassion) ಸಂದೇಶವನ್ನು ರಾಮ ಕಥಾಗಳ ಮೂಲಕ ನಿರಂತರವಾಗಿ ಸಾರುತ್ತಿರುವ ಮೊರಾರಿ ಬಾಪು ಅವರಿಗೆ ಈ ಯಾತ್ರೆಯು ಈ ಮೌಲ್ಯಗಳನ್ನು ಭಾರತದ ಉದ್ದಗಲಕ್ಕೂ ವಿಸ್ತರಿಸುವ ಮಾರ್ಗವಾಗಿದೆ. ಯಾತ್ರೆಯ ಸಂದರ್ಭದಲ್ಲಿ ನಡೆಯುವ ರಾಮ ಕಥಾ ಮತ್ತು ಇತರ ಕಾರ್ಯಕ್ರಮಗಳು ಎಲ್ಲರಿಗೂ ಮುಕ್ತವಾಗಿವೆ, ತಂಗುವ ಪ್ರತಿಯೊಂದು ಸ್ಥಳದಲ್ಲಿಯೂ ಪ್ರಸಾದ ರೂಪದಲ್ಲಿ ‘ಭಂಡಾರ’ದ (ಸಸ್ಯಾಹಾರಿ ಸಾಮೂಹಿಕ ಭೋಜನ) ವ್ಯವಸ್ಥೆಯನ್ನು ಮಾಡಲಾಗುವುದು.

# ಕತ್ತಲ ದಾರಿಯಲ್ಲಿ ಭರವಸೆಯ ಬೆಳಕು: ಸೀರೆಯುಟ್ಟು ಬರಿಗಾಲಲ್ಲಿ ಓಡಿದ ತಾಯಿಯ ಕಥೆ

ಬದುಕಿನ ಕತ್ತಲೆಯನ್ನು ಸೀಳಿ, ವಿಧಿಯ ಸವಾಲುಗಳನ್ನೇ ತನ್ನ ಸಾಧನೆಯ ಮೆಟ್ಟಿಲುಗಳನ್ನಾಗಿ ಮಾಡಿಕೊಂಡ ಜಾರ್ಖಂಡ್‌ನ ಕವಿತಾ ಕುಮಾರಿ ಅವರ ಹೃದಯಸ್ಪರ್ಶಿ ಹಾಗೂ ಸ್ಫೂರ್ತಿದಾಯಕ ಕಥೆ ಇಲ್ಲಿದೆ:

ಅದು ಜಾರ್ಖಂಡ್‌ನ ರಾಮ್ಗಢ ಜಿಲ್ಲೆಯ ಸೋಸೋ ಎಂಬ ಸಣ್ಣ ಹಳ್ಳಿ. ಸೂರ್ಯ ಇನ್ನೂ ಪೂರ್ತಿಯಾಗಿ ಕಣ್ಣು ತೆರೆದಿರುವುದಿಲ್ಲ. ಇಡೀ ಹಳ್ಳಿ ಸಮ್ಮೋಹನದ ನಿದ್ರೆಯಲ್ಲಿ ತೇಲುತ್ತಿರುವಾಗ, ಕತ್ತಲೆಯನ್ನು ಸೀಳಿಕೊಂಡು ಕಾಲ್ಗೆಜ್ಜೆಯ ಶಬ್ದದ ಬದಲು ಹೆಜ್ಜೆಗಳ ರಭಸದ ಸದ್ದು ಕೇಳಿಸುತ್ತದೆ. ಅದು ಕವಿತಾ ಕುಮಾರಿ ಎಂಬ 27 ವರ್ಷದ ತಾಯಿಯ ಹೆಜ್ಜೆಗಳ ಸದ್ದು!

ಕವಿತಾ ಅವರ ಜೀವನ ಕೆಲ ವರ್ಷಗಳ ಹಿಂದೆ ಹೀಗಿರಲಿಲ್ಲ. ಪ್ರೀತಿಯ ಗಂಡ, ಇಬ್ಬರು ಮುದ್ದಾದ ಮಕ್ಕಳು ಮತ್ತು ಪುಟ್ಟ ಸಂಸಾರ□ಇಷ್ಟೇ ಅವರ ಪ್ರಪಂಚವಾಗಿತ್ತು. ಆದರೆ ವಿಧಿ ಬರೆದ ಬರಹ ಬೇರೆಯೇ ಇತ್ತು. 2023ರಲ್ಲಿ ದೀರ್ಘಕಾಲದ ಅನಾರೋಗ್ಯದಿಂದ ಬಳಲುತ್ತಿದ್ದ ಪತಿ ದೀಪಕ್ ಕುಮಾರ್ ಮಹಾತೋ ಕಣ್ಣು ಮುಚ್ಚಿದಾಗ, ಕವಿತಾ ಅವರ ಪುಟ್ಟ ಪ್ರಪಂಚ ಒಂದೇ ಕ್ಷಣದಲ್ಲಿ ಉರುಳಿ ಬಿತ್ತು. ಹೆಗಲ ಮೇಲೆ ಇಬ್ಬರು ಎಳೆಯ ಮಕ್ಕಳ ಜವಾಬ್ದಾರಿ, ಜೊತೆಗೆ ಗಂಡನ ಚಿಕಿತ್ಸೆಗಾಗಿ ಮಾಡಿದ್ದ ಬರೋಬ್ಬರಿ 6 ಲಕ್ಷ ರೂಪಾಯಿಗಳ ಸಾಲದ ಬೆಟ್ಟ!

ವಿಧಿಯಾಟ–ಕ್ಕೆ ಮಂಡಿಯೂರಿ ಅಳಲು ಕವಿತಾಗೆ ಸಮಯವಿರಲಿಲ್ಲ. ಏಕೆಂದರೆ, ಅತ್ತು ಕುಳಿತರೆ ಮಕ್ಕಳ ಹೊಟ್ಟೆಗೆ ಹಿಟ್ಟು ಸಿಗುತ್ತಿರಲಿಲ್ಲ. ದುಃಖವನ್ನು ಎದೆಯಾಳದಲ್ಲಿ ಬಾಂಧಥು□ಕೊಂಡು, ಸಾಲ ತೀರಿಸಲು ಅವರು ಕೈಗೆ ಸಿಕ್ಕ ಕೆಲಸಗಳನ್ನೆಲ್ಲ ಮಾಡಿದರು. ಬಿಸಿಲಿನಲ್ಲಿ ಬೇಯುತ್ತಾ ಇಟ್ಟಿಗೆ ಭಟ್ಟಿಯಲ್ಲಿ ಕೂಲಿ ಕೆಲಸ ಮಾಡಿದರು. ರಾಮ್ಗಢದಲ್ಲಿ ಖಾಸಗಿ ಭದ್ರತಾ ಸಿಬ್ಬಂದಿಯಾಗಿ (ಸೆಕ್ಯುರಿಟಿ ಗಾರ್ಡ್) ರಕ್ಷಣೆಗೆ ನಿಂತರು. ಆದರೆ ರಾತ್ರಿ ಪಾಳಿಯ ಕೆಲಸ ಮುಗಿಸಿ ಹಳ್ಳಿಗೆ ಮರಳುವುದು ಕಷ್ಟವಾದಾಗ ಆ ಕೆಲಸವನ್ನೂ ಬಿಡಬೇಕಾಯಿತು.

ಇಷ್ಟೆಲ್ಲಾ ಕಷ್ಟಗಳ ನಡುವೆ, ಅವರ ಕಣ್ಣೆದುರು ಬಂದಿದ್ದು ಜಾರ್ಖಂಡ್ ಹೋಮ್ ಗಾರ್ಡ್ ನೇಮಕಾತಿಯ ಜಾಹೀರಾತು. 284 ಹುದ್ದೆಗಳಿಗೆ 16,000ಕ್ಕೂ ಹೆಚ್ಚು ಅರ್ಜಿಗಳು ಬಂದಿದ್ದವು. ಆದರೆ ಕವಿತಾಗೆ ಅದು ಕೇವಲ ಒಂದು ಸರ್ಕಾರಿ ಉದ್ಯೋಗವಾಗಿರಲಿಲ್ಲ; ತನ್ನ ಮಕ್ಕಳ ಭವಿಷ್ಯವನ್ನು ಬರೆಯುವ ಕೊನೆಯ ಭರವಸೆಯಾಗಿತ್ತು!

ತರಬೇತಿ ಪಡೆಯಲು ಅವರ ಬಳಿ ಹಣವಿರಲಿಲ್ಲ, ಮಾರ್ಗದರ್ಶನ ನೀಡಲು ಕೋಚ್ ಇರಲಿಲ್ಲ, ಓಡಲು ಸೂಕ್ತವಾದ ಶೂಗಳಿರಲಿಲ್ಲ. ಆದರೆ ಅವರ ಬಳಿ ಇತ್ತು ಒಂದೇ ಒಂದು ಶಕ್ತಿ□ಅದು *ತಾಯ್ತನದ ಅಪರಿಮಿತ ಧೈರ್ಯ*.

ತನಗೆ ಸ್ಮಾರ್ಟ್‌ಫೋನ್ ಸರಿಯಾಗಿ ಬಳಸಲು ಬರದಿದ್ದರೂ, ಮಕ್ಕಳ ಸಹಾಯದಿಂದ ಯೂಟ್ಯೂಬ್‌ನಲ್ಲಿ (YouTube) ಓಟದ ವೀಡಿಯೊಗಳನ್ನು ನೋಡಿ ಅಭ್ಯಾಸ ಮಾಡಲು ಶುರು ಮಾಡಿದರು. ಬೆಳಗ್ಗಿನ ಜಾವ ಹಳ್ಳಿಯ ಕಲ್ಮಶವಿಲ್ಲದ ರಸ್ತೆಗಳಲ್ಲಿ ಓಡಲು ತೊಡಗಿದರು. ನಂತರ ಉಚಿತ ತರಬೇತಿ ನೀಡುವ 'ಊಖಿ ಫಿಸಿಕಲ್ ಅಕಾಡೆಮಿ'ಯ ಅಜಯ್ ಕರ್ಮಾಲಿ ಅವರ ಪರಿಚಯವಾಗಿ, ತರಬೇತಿಯ ಹಾದಿ ಕೊಂಚ ಸುಗಮವಾಯಿತು.

ಅಕ್ಟೋಬರ್ 4ರ ಆ ದಿನ, ಸಿಧು–ಕನ್ಹು ಕ್ರೀಡಾಂಗಣದಲ್ಲಿ ಟ್ರಯಲ್ಸ್ (ಅಭ್ಯಾಸ ಪರೀಕ್ಷೆ) ಇತ್ತು. ಮೈದಾನದಲ್ಲಿದ್ದ ಇತರ ಅಭ್ಯರ್ಥಿಗಳು ಟ್ರ್ಯಾಕ್ಸೂಟ್, ದುಬಾರಿ ರನ್ನಿಂಗ್ ಶೂಗಳು ಮತ್ತು ಆಧುನಿಕ ಗೇರ್‌ಗಳನ್ನು ಧರಿಸಿ ನಿಂತಿದ್ದರು. ಆದರೆ ಕವಿತಾ ನಿಂತಿದ್ದು ಉಟ್ಟ ಸೀರೆ ಮತ್ತು ಕಾಲ್ಚೀಲವಿಲ್ಲದ ಚಪ್ಪಲಿಯಲ್ಲಿ.



**ಡಾ. ಪ್ರಸನ್ನ ದೇವರ ಮಠ**
ಅನಿಲಕುಮಾರ್, ಮಾಗಳ
ಪದವೀಧರ ಪ್ರಾಥಮಿಕ ಶಿಕ್ಷಕರು
ಸರಕಾರಿ ಹಿರಿಯ ಪ್ರಾಥಮಿಕ ಶಾಲೆ,
ಮುದೇನೂರು,
ಹೂವಿನಹಡಗಲಿ, ವಿಜಯನಗರ ಜಿಲ್ಲೆ

ಓಟ ಪ್ರಾರಂಭವಾಗುವ ಮುನ್ನ ಕವಿತಾ ತಮ್ಮ ಚಪ್ಪಲಿಯನ್ನು ಬದಿಗಿಟ್ಟರು. ಸೀರೆಯನ್ನೇ ಬಿಗಿಯಾಗಿ ಉಟ್ಟು–ಕೊಂಡರು.

ಸೀಟಿ ಶಬ್ದ ಕೇಳಿದ್ದೇ ತಡ, ಅವರು ಓಡಲು ಶುರು ಮಾಡಿದರು. ಅದು ಕೇವಲ 1,600 ಮೀಟರ್‌ಗಳ ಓಟವಾಗಿರಲಿಲ್ಲ; ಬಡತನದ ವಿರುದ್ಧ, ಸಾಲದ ಹೊರೆಯ ವಿರುದ್ಧ, ವಿಧಿಯ ಕ್ರೌರ್ಯದ ವಿರುದ್ಧ ಒಬ್ಬ ತಾಯಿ ನಡೆಸುತ್ತಿದ್ದ ಮಹಾಯುದ್ಧವಾಗಿತ್ತು! ಅವರ ಪ್ರತಿಯೊಂದು ಹೆಜ್ಜೆಯಲ್ಲೂ ಮಕ್ಕಳ ಹೊಟ್ಟೆಯ ಹಸಿವು ಮತ್ತು ಭವಿಷ್ಯದ ಕನಸುಗಳು ಓಡುತ್ತಿದ್ದವು.

ಮಹಿಳೆಯರಿಗೆ ನಿಗದಿಪಡಿಸಿದ್ದ 10 ನಿಮಿಷಗಳ ಗಡುವಿನ ಒಳಗಾಗಿಯೇ, ಕವಿತಾ ಅತ್ಯಂತ ಸುಲಭವಾಗಿ 1,600 ಮೀಟರ್ ದೂರವನ್ನು ಕ್ರಮಿಸಿ ಪೂರ್ಣ ಅಂಕಗಳನ್ನು ಗಳಿಸಿದರು. ಮೈದಾನದಲ್ಲಿದ್ದ ಪ್ರತಿಯೊಬ್ಬರೂ ಈ ದೃಶ್ಯವನ್ನು ನೋಡಿ ಕಣ್ಣೀರು ಹಾಕಿದರು, ಚಪ್ಪಾಳೆ ತಟ್ಟಿದರು.



ಅವರ ಈ ಸಾಹಸದ ವೀಡಿಯೊ ಇಂಟರ್ನೆಟ್‌ನಲ್ಲಿ ವೈರಲ್ ಆಗುತ್ತಿದ್ದಂತೆ, ದೇಶಾದ್ಯಂತ ಲಕ್ಷಾಂತರ ಜನರ ಹೃದಯವನ್ನು ತಟ್ಟಿತು. ಶಾಸಕರೊಬ್ಬರು ಅವರಿಗೆ ಹೊಸ ಟ್ರ್ಯಾಕ್ಸೂಟ್ ಮತ್ತು ಶೂಗಳನ್ನು ಉಡುಗೊರೆ–ಯಾಗಿ ನೀಡಿದರು. ಕೊನೆಗೂ ಬರಿಗಾಲಲ್ಲಿ ಓಡುತ್ತಿದ್ದ ಆ ಕಾಲುಗಳಿಗೆ ಸರಿಯಾದ ಪಾದರಕ್ಷೆಗಳು ಸಿಕ್ಕವು.

*"ಬಿದ್ದು ಹೋಗಲು ಸಾವಿರ ಕಾರಣಗಳಿದ್ದರೂ, ಎದ್ದು ನಿಂತು ಗೆಲ್ಲಲು ಮಕ್ಕಳ ಮುಖವೊಂದೇ ಸಾಕಿತ್ತು."*

ಕವಿತಾ ಕುಮಾರಿ ಅವರ ಕಥೆ ನಮಗೆ ಕಲಿಸುವುದು ಇಷ್ಟೇ□ಪರಿಸ್ಥಿತಿಗಳು ಎಷ್ಟೇ ಕೆಟ್ಟದಾಗಿದ್ದರೂ, ಬದುಕಿನಲ್ಲಿ ಸೋಲೊಪ್ಪಿಕೊಳ್ಳದೆ ಧೈರ್ಯದಿಂದ ಹೋರಾಡಿದರೆ, ಜಗತ್ತೇ ನಮಗೆ ತಲೆಬಾಗುತ್ತದೆ!

# ಹೈಕೋರ್ಟ್ ತೀರ್ಪಿನ ಬೆನ್ನಲ್ಲೇ ಅಂಜನಾದ್ರಿ ಬೆಟ್ಟದಲ್ಲಿ ಮಹತ್ವದ ಬೆಳವಣಿಗೆ: ಮುಜರಾಯಿ ಸಿಬ್ಬಂದಿ ಹೊರಕ್ಕೆ, 8 ಕಟ್ಟಡಗಳಿಗೆ ಬೀಗ

ಕೊಪ್ಪಳ, 14–ಅಂಜನಾದ್ರಿ ಬೆಟ್ಟದ ದೇವಸ್ಥಾನದ ಆಡಳಿತ ವಿಚಾರದಲ್ಲಿ ಹೈಕೋರ್ಟ್ ಮಹತ್ವದ ತೀರ್ಪು ನೀಡಿದ ಬೆನ್ನಲ್ಲೇ ಹೊಸ ಬೆಳವಣಿಗೆ ನಡೆದಿದೆ. ಗಂಗಾವತಿ ತಾಲೂಕಿನ ಹನುಮನಹಳ್ಳಿ ಬಳಿಯ ಅಂಜನಾದ್ರಿ ಬೆಟ್ಟದಲ್ಲಿ ಮುಜರಾಯಿ ಇಲಾಖೆಯ ಸಿಬ್ಬಂದಿಯನ್ನು ಹೊರಗೆ ಕಳುಹಿಸಿರುವ ವಿದ್ಯಾದಾಸ್ ಬಾಬಾ, ದೇವಸ್ಥಾನದ ಗರ್ಭಗುಡಿ ಹೊರತುಪಡಿಸಿ ಆಡಳಿತ ಕಚೇರಿ ಸೇರಿದಂತೆ ಎಂಟು ಕಟ್ಟಡಗಳಿಗೆ ಬೀಗ ಹಾಕಿದ್ದಾರೆ.

ಮುಜರಾಯಿ ಸಿಬ್ಬಂದಿ ಹೊರಕ್ಕೆ, ಕಟ್ಟಡಗಳಿಗೆ ಬೀಗ

ಆಂಜನೇಯನ ಜನ್ಮಸ್ಥಳವೆಂದು ಪ್ರಸಿದ್ಧಿ ಪಡೆದಿರುವ ಅಂಜನಾದ್ರಿ ಬೆಟ್ಟದಲ್ಲಿ ದೇವಸ್ಥಾನದ ಆಡಳಿತ ಕಚೇರಿ ಸೇರಿದಂತೆ ವಿವಿಧ ಕಟ್ಟಡಗಳಿಗೆ ಬೀಗ ಹಾಕಲಾಗಿದೆ. ಆಡಳಿತ ಕಚೇರಿ, ಉಗ್ರಾಣ ಕೊಠಡಿ, ಸಂಸ್ಕೃತ ಪಾಠಶಾಲೆ, ಅಡುಗೆ ಕೋಣೆ ಸೇರಿದಂತೆ ಒಟ್ಟು ಎಂಟು ಕಟ್ಟಡಗಳಿಗೆ ವಿದ್ಯಾದಾಸ್ ಬಾಬಾ ಬೀಗ ಹಾಕಿದ್ದಾರೆ. ಧಾರ್ಮಿಕ ದತ್ತಿ ಇಲಾಖೆಯ ಸಿಬ್ಬಂದಿಯನ್ನು ಬೆಟ್ಟದಿಂದ ಕೆಳಗಿಳಿಸಲಾಗಿದ್ದು, ಸಿಬ್ಬಂದಿಗೆ ಮತ್ತೆ ಬೆಟ್ಟದ ಮೇಲೆ ಬರಲು ಪ್ರವೇಶ ನಿರಾಕರಿಸಲಾಗಿದೆ.

ದೇವಸ್ಥಾನದ ಗರ್ಭಗುಡಿಯನ್ನು ಹೊರತುಪಡಿಸಿ ಉಳಿದ ಕಟ್ಟಡಗಳಿಗೆ ಬೀಗ ಹಾಕಿರುವ ಹಿನ್ನೆಲೆಯಲ್ಲಿ ಆಡಳಿತಾತ್ಮಕ ಚಟುವಟಿಕೆಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ. ದೇವಸ್ಥಾನದ ಸುತ್ತ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ. ಸ್ಥಳಕ್ಕೆ ಜಿಲ್ಲಾಧಿಕಾರಿ ಆಗಮಿಸುವ ಸಾಧ್ಯತೆಯೂ ಇದೆ.

ಹೈಕೋರ್ಟ್ ತೀರ್ಪಿನ ಬೆನ್ನಲ್ಲೇ ಬೆಳವಣಿಗೆ

ಅಂಜನಾದ್ರಿ ದೇವಸ್ಥಾನವನ್ನು ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಸೇರಿಸಿ ಸರ್ಕಾರ ಹೊರಡಿಸಿದ್ದ ಅಧಿಸೂಚನೆ ಹಾಗೂ ಆಡಳಿತಾಧಿಕಾರಿ ನೇಮಕದ ಆದೇಶಗಳನ್ನು ಕರ್ನಾಟಕ ಹೈಕೋರ್ಟ್ ಅಕ್ಟೋಬರ್ 9ರಂದು ರದ್ದುಪಡಿಸಿತ್ತು. ಸಂಬಂಧಪಟ್ಟವರಿಗೆ ಸೂಕ್ತ ನೋಟಿಸ್ ನೀಡದೆ ಮತ್ತು ಅವರ ವಾದ ಆಲಿಸದೆ ಕ್ರಮ ಕೈಗೊಂಡಿರುವುದು ನೈಸರ್ಗಿಕ ನ್ಯಾಯದ ತತ್ವಗಳಿಗೆ ವಿರುದ್ಧವಾಗಿದೆ ಎಂದು ನ್ಯಾಯಾಲಯ ಗಮನಿಸಿತ್ತು.

ಅಂಜನಾದ್ರಿ ಬೆಟ್ಟದಲ್ಲಿ ಪೊಲೀಸ್ ಭದ್ರತೆ

ಸರ್ಕಾರದ 2018ರ ಸೆಪ್ಟೆಂಬರ್ 24 ರ ಆದೇಶ ಮತ್ತು ಅದೇ ವರ್ಷದ ಡಿಸೆಂಬರ್ 15ರಂದು ಆಡಳಿತಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಯನ್ನು ನೇಮಿಸಿದ್ದ ಆದೇಶವನ್ನು ನ್ಯಾಯಾಲಯ ರದ್ದುಪಡಿಸಿತ್ತು. ವಿದ್ಯಾದಾಸ್ ಬಾಬಾ ಅವರಿಗೆ ದೇವಸ್ಥಾನದಲ್ಲಿ ಪೂಜೆ ಮತ್ತು ಅರ್ಚಕ ಕರ್ತವ್ಯ ನಿರ್ವಹಿಸಲು ಸುಪ್ರೀಂ ಕೋರ್ಟ್ ಹಿಂದಿನ ಆದೇಶ ಹಾಗೂ ಹೈಕೋರ್ಟ್ ಆದೇಶಗಳ ಅನ್ವಯ ಅವಕಾಶವಿದೆ ಎಂಬ ಅಂಶವನ್ನೂ ನ್ಯಾಯಾಲಯ ಸ್ಪಷ್ಟಪಡಿಸಿತ್ತು.




ಆದರೆ, ಈ ತೀರ್ಪಿನಿಂದ ದೇವಸ್ಥಾನದ ಮೇಲೆ ಸರ್ಕಾರಕ್ಕೆ ಶಾಶ್ವತ ಹಕ್ಕಿಲ್ಲ ಎಂಬ ಅಂತಿಮ ಘೋಷಣೆಯಾಗಿದೆ ಎಂದು ಅರ್ಥೈಸಬಾರದು. ಅಗತ್ಯವಿದ್ದರೆ ಕಾನೂನು ಪ್ರಕ್ರಿಯೆ ಅನುಸರಿಸಿ ಸರ್ಕಾರ ಹೊಸದಾಗಿ ಅಧಿಸೂಚನೆ ಹೊರಡಿಸಬಹುದು ಎಂದೂ ಹೈಕೋರ್ಟ್ ತಿಳಿಸಿತ್ತು.

ವಿದ್ಯಾದಾಸ್ ಬಾಬಾ ಯಾರು?

ವಿದ್ಯಾದಾಸ್ ಬಾಬಾ ಅಂಜನಾದ್ರಿ ಬೆಟ್ಟದ ದೇವಸ್ಥಾನದ ಹಿಂದಿನ ಅರ್ಚಕರಾಗಿದ್ದು, ಉತ್ತರ ಭಾರತ ಮೂಲದವರು. ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವ ಹಕ್ಕು ಮತ್ತು ಆಡಳಿತದ ವಿಚಾರವಾಗಿ ಈ ಹಿಂದೆ ವಿವಾದ ಉಂಟಾಗಿ–ತ್ತು. ಇದೀಗ ಹೈಕೋರ್ಟ್ ತೀರ್ಪಿನ ಬೆನ್ನಲ್ಲೇ ಮುಜರಾಯಿ ಸಿಬ್ಬಂದಿಯನ್ನು ಹೊರಗಿಟ್ಟು ಕಟ್ಟಡಗಳಿಗೆ ಬೀಗ ಹಾಕಿರುವ ಬೆಳವಣಿಗೆ ದೇವಸ್ಥಾನದ ಆಡಳಿತದ ಕುರಿತು ಮತ್ತೆ ಚರ್ಚೆ ಹುಟ್ಟುಹಾಕಿದೆ.

# ಕೊಡಗಿನಲ್ಲಿ ಅಕ್ರಮ ಬಾಂಗ್ಲಾ ವಲಸಿಗರು ಪತ್ತೆ: ನಾಲ್ವರ ಬಂಧನ!

ಮಡಿಕೇರಿ, 14– ಕರ್ನಾಟಕದಲ್ಲಿ ಅಕ್ರಮ ಬಾಂಗ್ಲಾದೇಶಿ ವಲಸಿಗರ ಹಾವಳಿ ತೀವ್ರಗೊಳ್ಳುತ್ತಿದ್ದು, ಬೆಂಗಳೂರಿನ ಬೆಳ್ಳಂದೂರು ಮತ್ತು ವರ್ತೂರು ಭಾಗಗಳಲ್ಲಿ ಇತ್ತೀಚೆಗಷ್ಟೇ ನಡೆಸಲಾದ ಬೃಹತ್ ಕಾರ್ಯಾಚರಣೆಯಲ್ಲಿ (ಆಪರೇಷನ್ ಮುಕ್ತ) 160ಕ್ಕೂ ಹೆಚ್ಚು ಬಾಂಗ್ಲಾ ಪ್ರಜೆಗಳನ್ನು ಗಡಿಪಾರು ಮಾಡಲಾಗಿತ್ತು. ಈ ರೀತಿಯ ತೀವ್ರ ನಿಗಾದ ನಡುವೆಯೂ, ಅಕ್ರಮ ವಲಸಿಗರು ಇದೀಗ ಮಲೆನಾಡು ಭಾಗಗಳತ್ತ ಮುಖ ಮಾಡುತ್ತಿದ್ದು, ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲೂಕಿನ ಬಾಳೆಲೆಯಲ್ಲಿ ನಾಲ್ವರು ಬಾಂಗ್ಲಾ ಪ್ರಜೆಗಳು ಸ್ಥಳೀಯರ ಕೈಗೆ ಸಿಕ್ಕಿಬಿದ್ದಿದ್ದಾರೆ.

ತೋಟದ ಮನೆಯೊಂದರಲ್ಲಿ ಆಶ್ರಯ ಪಡೆದಿದ್ದ ಬಾಂಗ್ಲಾದೇಶಿ ಪ್ರಜೆಗಳು

ಪೊನ್ನಂಪೇಟೆ ತಾಲೂಕಿನ ಬಾಳೆಲೆ ಗ್ರಾಮದ ಕೊಟ್ಟಗೇರಿ ಎಂಬಲ್ಲಿರುವ ತೋಟದ ಮನೆಯೊಂದರಲ್ಲಿ ಆಶ್ರಯ ಪಡೆದಿದ್ದ ನಾಲ್ವರು ಬಾಂಗ್ಲಾದೇಶಿ ಪ್ರಜೆಗಳನ್ನು ಹಿಂದೂ ಜಾಗರಣ ವೇದಿಕೆ ಹಾಗೂ ಆಟೋ ಚಾಲಕರ ಸಂಘದ ಕಾರ್ಯಕರ್ತರು ಪತ್ತೆ ಹಚ್ಚಿದ್ದಾರೆ. ವಿಚಾರಣೆ ವೇಳೆ, ತಾವು ಬಾಂಗ್ಲಾದೇಶದ ನಿಯಾಸ್ಪುರ್ ಗ್ರಾಮದವರಾಗಿದ್ದು, ಬ್ರೋಕರ್ ಒಬ್ಬನ ನೆರವಿನಿಂದ ಗಡಿ ದಾಟಿ ಭಾರತ ಪ್ರವೇಶಿಸಿರುವುದಾಗಿ ಹೇಳಿಕೆ ನೀಡಿದ್ದಾರೆ. ಬಳಿಕ ಕಾರ್ಯಕರ್ತರು ಈ ನಾಲ್ವರನ್ನು ಪೊನ್ನಂಪೇಟೆ ಪೊಲೀಸರಿಗೆ ಹಸ್ತಾಂತರಿಸಿದ್ದಾರೆ.

ಕೊಡಗು ಜಿಲ್ಲೆಯಾದ್ಯಂತ ಸಾವಿರಾರು ಅಕ್ರಮ ಬಾಂಗ್ಲಾ ವಲಸಿಗರು ತೋಟದ ಕಾರ್ಮಿಕರಾಗಿ ಹಾಗೂ ಇತರೆ ಕೆಲಸಗಳಲ್ಲಿ ನೆಲೆಸಿರುವ ಶಂಕೆ ವ್ಯಕ್ತವಾಗಿದೆ. ಅಕ್ರಮ ವಲಸಿಗರನ್ನು ಪತ್ತೆಹಚ್ಚುವಲ್ಲಿ ಪೊಲೀಸ್ ಇಲಾಖೆ ಸಂಪೂರ್ಣ ವಿಫಲವಾಗಿದೆ ಎಂದು ಕಾರ್ಯಕರ್ತರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ತಕ್ಷಣವೇ ಜಿಲ್ಲೆಯಾದ್ಯಂತ ಸಮಗ್ರ ತನಿಖೆ ನಡೆಸಿ ಎಲ್ಲರನ್ನೂ ಗಡಿಪಾರು ಮಾಡಬೇಕೆಂದು ಆಗ್ರಹಿಸಿದ್ದಾರೆ.

ಬೆಂಗಳೂರಿನಲ್ಲಿ 160ಕ್ಕೂ ಹೆಚ್ಚು ವಲಸಿಗರು



ಪತ್ತೆ ಕರ್ನಾಟಕದಲ್ಲಿ ಅಕ್ರಮವಾಗಿ ನೆಲೆಸಿರುವ ಬಾಂಗ್ಲಾದೇಶಿಯರ ಪತ್ತೆ ಹಾಗೂ ಗಡಿಪಾರು ಕಾರ್ಯಾಚರಣೆ ತೀವ್ರಗೊಂಡಿದೆ. ಇತ್ತೀಚೆಗಷ್ಟೇ ಬೆಂಗಳೂರು ನಗರ ಪೊಲೀಸರು ಹಾಗೂ ಅಂತರರಾಷ್ಟ್ರೀಯ ನೋಂದಣಿ ಕಚೇರಿ (FRRO) ಜಂಟಿಯಾಗಿ 'ಆಪರೇಷನ್ ಮುಕ್ತ' ಹೆಸರಿನಲ್ಲಿ ನಡೆಸಿದ ಕಾರ್ಯಾಚರಣೆಯಲ್ಲಿ, ಯಾವುದೇ ಅಧಿಕೃತ ದಾಖಲೆಗಳಿಲ್ಲದೆ ಬೆಂಗಳೂರಿನ ಬೆಳ್ಳಂದೂರು, ವರ್ತೂರು, ಮಾರತಹಳ್ಳಿ ಸೇರಿದಂತೆ ವಿವಿಧೆಡೆ ನೆಲೆಸಿದ್ದ 160ಕ್ಕೂ ಹೆಚ್ಚು ಬಾಂಗ್ಲಾದೇಶಿ ಪ್ರಜೆಗಳನ್ನು ವಶಕ್ಕೆ ಪಡೆದು ವಿಶೇಷ ವಿಮಾನ ಹಾಗೂ ರೈಲಿನ ಮೂಲಕ ಸ್ವದೇಶಕ್ಕೆ ಗಡಿಪಾರು ಮಾಡಲಾಗಿತ್ತು. ಬೆಂಗಳೂರು ಹಾಗೂ ಇತರ ಜಿಲ್ಲೆಗಳಲ್ಲಿ ನಕಲಿ ದಾಖಲೆ ಸೃಷ್ಟಿಸಿ ನೆಲೆಸುತ್ತಿರುವವರ ವಿರುದ್ಧ ಗೃಹ ಇಲಾಖೆ ಹಾಗೂ ಪೊಲೀಸರು ತೀವ್ರ ನಿಗಾ ವಹಿಸಿದ್ದಾರೆ.

## ನಿರ್ಬಂಧದ ನಡುವೆಯೂ ದಸರಾ ಆನೆಗಳ ಜೊತೆ ಶಾಸಕರ ಮಕ್ಕಳ ವಿಶೇಷ ಫೋಟೋಶೂಟ್! ಜನರ ಆಕ್ರೋಶ

ಮೈಸೂರು, 14– ಮೈಸೂರು ಅರಮನೆಯಲ್ಲಿ ದಸರಾ ಗಜಪಡೆಯನ್ನು ವೀಕ್ಷಿಸಲು ಹಾಗೂ ಅವುಗಳ ಜೊತೆ ಫೋಟೋ, ವಿಡಿಯೋ ತೆಗೆಯಲು ಸಾರ್ವಜನಿಕರಿಗೆ ಕಟ್ಟುನಿಟ್ಟಿನ ನಿರ್ಬಂಧ ವಿಧಿಸಲಾಗಿದೆ. ಆದರೆ, ಶಾಸಕ ವಿನಯ್ ಕುಲಕರ್ಣಿ ಅವರ ಮಕ್ಕಳಿಗೆ ಆನೆಗಳ ಜೊತೆ ಪ್ರತ್ಯೇಕವಾಗಿ ಫೋಟೋಶೂಟ್ ಮಾಡಲು ಅವಕಾಶ ನೀಡಲಾಗಿದೆ ಎಂಬ ಗಂಭೀರ ಆರೋಪ ಕೇಳಿಬಂದಿದೆ.

ಸಾಮಾನ್ಯ ಜನರಿಗೆ ಪ್ರವೇಶ ನಿರಾಕರಿಸಿರುವ ಜಾಗದಲ್ಲೇ ಶಾಸಕರ ಮಕ್ಕಳು ದಸರಾ ಆನೆಯ ದಂತ ಹಿಡಿದು ಫೋಟೋ ತೆಗೆಸಿಕೊಂಡಿದ್ದಾರೆ ಎನ್ನಲಾದ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ವೈರಲ್ ಆಗಿವೆ. "ಸಾಮಾನ್ಯರಿಗೊಂದು ನಿಯಮ, ರಾಜಕಾರಣಿಗಳ ಮಕ್ಕಳಿಗೊಂದು ನಿಯಮವೇ?" ಎಂದು ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಅರಣ್ಯ ಇಲಾಖೆ ಹಾಗೂ ಅರಮನೆ ಆಡಳಿತ ಮಂಡಳಿಯ ಈ ತಾರತಮ್ಯದ ನಡೆಗೆ ಸೋಷಿಯಲ್ ಮೀಡಿಯಾದಲ್ಲಿ ಸಾರ್ವಜನಿಕರಿಂದ ವ್ಯಾಪಕ ಖಂಡನೆ ವ್ಯಕ್ತವಾಗುತ್ತಿದೆ.

ಧಾರವಾಡದ ಬಿಜೆಪಿ ಮುಖಂಡ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ಕಾಂಗ್ರೆಸ್ ಮುಖಂಡ ವಿನಯ್ ಕುಲಕರ್ಣಿಗೆ ನೀಡಿದ್ದ ಶಿಕ್ಷೆಗೆ ಹೈಕೋರ್ಟ್ ತಡೆ ನೀಡಿದೆ. ಕೋರ್ಟ್ ಆದೇಶದಂತೆ ಸದ್ಯಕ್ಕೆ ಕುಲಕರ್ಣಿ ಜಾಮೀನು ಪಡೆದು ಹೊರಬಂದಿದ್ದಾರೆ. ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಮೇಲ್ಮನವಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಅ.27ಕ್ಕೆ ಮುಂದೂಡಿದೆ. ಇದರ ನಡುವೆ ಅವರ ಮಕ್ಕಳ ಮೇಲಿನ ನಿಯಮ ಉಲ್ಲಂಘನೆಯ ಆರೋಪ ಮತ್ತಷ್ಟು ಚರ್ಚೆಗೆ ಗ್ರಾಸವಾಗಿದೆ.

## ದೇವನಹಳ್ಳಿ ಬಳಿ ಗ್ಯಾಸ್ ಲಾರಿಗೆ ರೇಂಜ್ ರೋವರ್ ಡಿಕ್ಕಿ; ಮಾಲೂರು ಬಿಜೆಪಿ ಮುಖಂಡ ಶಿವಕುಮಾರ್ ಸ್ಥಳದಲ್ಲೇ ಸಾವು!

ದೇವನಹಳ್ಳಿ, 14– ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಬಳಿ ನಡೆದ ಭೀಕರ ರಸ್ತೆ ಅಪಘಾತದಲ್ಲಿ ಮಾಲೂರು ಬಿಜೆಪಿ ಮುಖಂಡ ಹಾಗೂ ಬಳಕಾಲೂರು ಟಿಕೆಟ್ ಆಕಾಂಕ್ಷಿಯಾಗಿದ್ದ ಶಿವಕುಮಾರ್ (50) ಮೃತಪಟ್ಟಿದ್ದಾರೆ. ಚಿತ್ರದುರ್ಗದಿಂದ ಮಾಲೂರಿಗೆ ರೇಂಜ್ ರೋವರ್ ಕಾರಿನಲ್ಲಿ ತೆರಳುತ್ತಿದ್ದಾಗ ಈ ದುರ್ಘಟನೆ ಸಂಭವಿಸಿದೆ.

ಹೊಸಕೋಟೆ–ದಾಬಸ್‌ಪೇಟೆಯ ರಿಂಗ್ ರಸ್ತೆಯ ಹೆದ್ದಾರಿಯಲ್ಲಿ ಓವರ್‌ಟೇಕ್ ಮಾಡುವ ಭರದಲ್ಲಿ, ಮುಂದೆ ಸಾಗುತ್ತಿದ್ದ ಗ್ಯಾಸ್ ಲಾರಿಗೆ ರೇಂಜ್ ರೋವರ್ ಕಾರು ಅತಿ ವೇಗವಾಗಿ ಡಿಕ್ಕಿ ಹೊಡೆದಿದೆ ಎನ್ನಲಾಗಿದೆ. ಡಿಕ್ಕಿಯ ರಭಸಕ್ಕೆ ರೇಂಜ್ ರೋವರ್ ಕಾರಿನ ಮುಂಭಾಗ ಸಂಪೂರ್ಣವಾಗಿ ನಜ್ಜುಗುಜ್ಜಾಗಿದೆ. ಪರಿಣಾಮ, ಗಂಭೀರವಾಗಿ ಗಾಯಗೊಂಡಿದ್ದ ಶಿವಕುಮಾರ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಕಾರಿನಲ್ಲಿದ್ದ ಇತರ ಮೂವರು ಪ್ರಯಾಣಿಕರು ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಕೂಡಲೇ ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಸದ್ಯ ಗಾಯಾಳುಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಘಟನೆಯ ಕುರಿತು ದೇವನಹಳ್ಳಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

# ರಾಹುಲ್ ಗಾಂಧಿ ನಿವಾಸದಲ್ಲಿ ಇಂಡಿ ಒಕ್ಕೂಟದ ಸಭೆ,



ನವದೆಹಲಿ, 14– ಮುಖ್ಯ ಚುನಾವಣಾ ಆಯುಕ್ತರ ವಿರುದ್ಧ ಹಾಗೂ ಮತ ಕಳ್ಳತನ ಆರೋಪಗಳ ಕುರಿತು ಸೋಮವಾರ ದೆಹಲಿ ಬೀದಿಗಳಲ್ಲಿ ನಡೆಸಿದ ಬೃಹತ್ ಶಕ್ತಿ ಪ್ರದರ್ಶನದ ನಂತರ, 'ಇಂಡಿ' ಮೈತ್ರಿಕೂಟದ ಸಂಸದರು ಮಂಗಳವಾರ ಸಂಜೆ ನವದೆಹಲಿಯ ಸುನಹರಿ ಬಾಗ್ ರಸ್ತೆಯಲ್ಲಿರುವ ರಾಹುಲ್ ಗಾಂಧಿ ಅವರ ಅಧಿಕೃತ ನಿವಾಸದಲ್ಲಿ ಮಹತ್ವದ ಸಭೆ ನಡೆಸಿದರು. ಸೋಮವಾರದ ಸುಪ್ರೀಂ ಕೋರ್ಟ್ ಮಾರ್ಚ್ ಯಶಸ್ಸಿನ ಬಳಿಕ ಸಂಸದರಲ್ಲಿ ಉತ್ಸಾಹ ಹೆಚ್ಚಾಗಿದ್ದು, ಮುಂದಿನ ಹಂತದ ಕಾರ್ಯತಂತ್ರಗಳನ್ನು ರೂಪಿಸಲು ಈ ಸಭೆ ವೇದಿಕೆಯಾಯಿತು.

ಇತ್ತೀಚಿನ ಸಭೆಗಳಿಗೆ ಗೈರಾಗಿದ್ದ ಕಾರಣಕ್ಕಾಗಿ ಅಪಸ್ವರ ಎದುರಿಸುತ್ತಿದ್ದ ಸಮಾಜವಾದಿ ಪಕ್ಷದ (SP) 22 ಸಂಸದರು ಹಾಗೂ ಉದ್ಧವ್ ಠಾಕ್ರೆ ಬಣದ ಶಿವಸೇನಾ (UBT) ಸಂಸದರು ಈ ಸಭೆಯಲ್ಲಿ ಪೂರ್ಣ ಪ್ರಮಾಣದಲ್ಲಿ ಹಾಜರಾಗಿ ಮೈತ್ರಿಕೂಟದ ಐಕ್ಯತೆಯನ್ನು ಪ್ರದರ್ಶಿಸಿದರು. ಸಭೆಯಲ್ಲಿ ಸುಮಾರು 40 ದುಂಡುಮೇಜುಗಳ ವ್ಯವಸ್ಥೆ ಮಾಡಲಾಗಿತ್ತು. ಒಂದೇ ಪಕ್ಷದ ನಾಯಕರು ಒಂದೆಡೆ ಕೂರುವ ಬದಲು, ವಿವಿಧ ರಾಜ್ಯಗಳ ಹಾಗೂ ಪಕ್ಷಗಳ ನಾಯಕರನ್ನು ಒಟ್ಟಿಗೆ ಕೂರಿಸಿ ಸಮಾಲೋಚನೆ ನಡೆಸುವಂತೆ ಯೋಜಿಸಲಾಗಿತ್ತು.

ಹಬ್ಬಗಳ ಹಿನ್ನೆಲೆ ತಾತ್ಕಾಲಿಕ ವಿರಾಮ: ದುರ್ಗಾಪೂಜೆ, ನವರಾತ್ರಿ ಮತ್ತು ದೀಪಾವಳಿ ಹಬ್ಬಗಳ ಸರಣಿ ಇರುವುದರಿಂದ, ಸಾಮಾನ್ಯ ಜನರಿಗೆ ತೊಂದರೆಯಾಗದಂತೆ ಮುಂದಿನ ಕೆಲ ದಿನಗಳವರೆಗೆ ಯಾವುದೇ ಬೀದಿಗಿಳಿದ ಧರಣಿ ಅಥವಾ ಮೆರವಣಿಗೆಗಳನ್ನು ನಡೆಸದಿರಲು ನಿರ್ಧರಿಸಲಾಯಿತು. ಹಬ್ಬಗಳ ಮುಕ್ತಾಯದ ನಂತರವೇ ಹೊಸ ಆಂದೋಲನ ಶುರುವಾಗಲಿದೆ.

ಸಿಜೆಪಿ ಮತ್ತು ಎಎಪಿಯಿಂದ ಅಂತರ: ಜಂತರ್ ಮಂತರ್‌ನಲ್ಲಿ ಗಲಾಟೆ ನಡೆಸುತ್ತಿರುವ ಕಾಕ್ರೋಚ್ ಜನತಾ ಪಾರ್ಟಿ (CJP) ಚಟುವಟಿಕೆಗಳಿಂದ ಇಂಡಿ ಬ್ಲಾಕ್ ಅಧಿಕೃತವಾಗಿ ಅಂತರ ಕಾಯ್ದುಕೊಳ್ಳಲು ತೀರ್ಮಾನಿಸಿತು. ಇದರ ಜೊತೆಗೆ ಅರವಿಂದ್ ಕೇಜ್ರಿವಾಲ್ ನೇತೃತ್ವದ ಆಮ್ ಆದ್ಮಿ ಪಕ್ಷ (AAP) ಮೈತ್ರಿಕೂಟದ ಕಾರ್ಯಕ್ರಮಗಳಿಂದ ದೂರ ಉಳಿಯುತ್ತಿರುವ ಬಗ್ಗೆಯೂ ಸಭೆಯಲ್ಲಿ ಅಸಮಾಧಾನ ವ್ಯಕ್ತವಾಯಿತು.

ಉತ್ತರ ಪ್ರದೇಶದಲ್ಲಿ ನಗೀನಾ ಸಂಸದ ಹಾಗೂ ಆಜಾದ್ ಸಮಾಜ ಪಕ್ಷದ ಮುಖ್ಯಸ್ಥ ಚಂದ್ರಶೇಖರ್ ಆಜಾದ್ ಅವರನ್ನು ಮೈತ್ರಿಕೂಟದ ಒಳಗೆ ಸೇರಿಸಿಕೊಳ್ಳುವುದಕ್ಕೆ ಸಮಾಜವಾದಿ ಪಕ್ಷ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ ಎನ್ನಲಾಗಿದೆ. ದೆಹಲಿ ಪೊಲೀಸರು ಜಂತರ್ ಮಂತರ್‌ನಲ್ಲಿ ಪ್ರತಿಭಟನೆಗಳನ್ನು ನಿಷೇಧಿಸಿ, ದುಬಾರಿ ಬಾಡಿಗೆಯ ರಾಮಲೀಲಾ ಮೈದಾನ ಸೇರಿದಂತೆ 3 ಪರ್ಯಾಯ ಸ್ಥಳಗಳನ್ನು ನಿಗದಿಪಡಿಸಿರುವುದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲು ಹಾಗೂ ರಾಜಕೀಯವಾಗಿ ಎದುರಿಸಲು ನಾಯಕರು ಒಮ್ಮತದ ನಿರ್ಧಾರ ಕೈಗೊಂಡರು.

ಎಡಪಂಥೀಯ ನಾಯಕಿ ನೇಹಾ ಬೋರಾ ಪ್ರಭಾವ ಮತ್ತು ರಾಜಕೀಯ ಊಹಾಪೋಹ ಸಭೆಯಲ್ಲಿ ಆಲ್ ಇಂಡಿಯಾ ಸ್ಟೂಡೆಂಟ್ಸ್ ಅಸೋಸಿಯೇಷನ್ (AISA) ನಾಯಕಿ ನೇಹಾ ಬೋರಾ ಅವರ ಉಪಸ್ಥಿತಿ ತೀವ್ರ ಗಮನ ಸೆಳೆಯಿತು. ಸೋಮವಾರದ ಪ್ರತಿಭಟನೆಯಲ್ಲಿ ಟ್ರಕ್ ಮೇಲೆ ಪ್ರಿಯಾಂಕಾ ಗಾಂಧಿ ಪಕ್ಕದಲ್ಲೇ ನಿಂತು ಗಮನ ಸೆಳೆದಿದ್ದ ನೇಹಾ ಬೋರಾ ಅವರಿಗೆ, ಹೈ ಟೀ ಸಭೆಯಲ್ಲೂ ವಿಶೇಷ ಪ್ರಾಮುಖ್ಯತೆ ನೀಡಲಾಯಿತು.

ಮಾಜಿ ಜೆಎನ್‌ಯು ನಾಯಕ ಕನ್ಹಯ್ಯಾ ಕುಮಾರ್ ಸಿಪಿಐ ತೊರೆದು ಕಾಂಗ್ರೆಸ್ ಸೇರಿದ ಮಾದರಿಯಲ್ಲೇ, ಪ್ರಭಾವಿ ವಿದ್ಯಾರ್ಥಿ ನಾಯಕಿ ನೇಹಾ ಬೋರಾ ಕೂಡ ಶೀಘ್ರದಲ್ಲೇ ಕಾಂಗ್ರೆಸ್ ಪಕ್ಷಕ್ಕೆ ಅಧಿಕೃತವಾಗಿ ಸೇರ್ಪಡೆಯಾಗಲಿದ್ದಾರೆ ಎಂಬ ರಾಜಕೀಯ ಊಹಾಪೋಹಗಳು ಈ ಸಭೆಯ ಬೆನ್ನಲ್ಲೇ ಬಲವಾಗಿ ಕೇಳಿಬರುತ್ತಿವೆ.

## ವರ್ಲ್ಡ್ ಸ್ಕಿಲ್ ಸ್ಪರ್ಧೆ–2026: ಆಸಕ್ತ ಯುವಜನರು ನೋಂದಾಯಿಸಿಕೊಳ್ಳಿ

ಕೊಪ್ಪಳ,14– ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ ವತಿಯಿಂದ ಸ್ಕಿಲ್ ಇಂಡಿಯಾ ಕಾರ್ಯಕ್ರಮವು ವಿಶ್ವದ ಅತಿ ದೊಡ್ಡ ಕೌಶಲ್ಯ ವರ್ಲ್ಡ್ ಸ್ಕಿಲ್ ಸ್ಪರ್ಧೆಯು ಪ್ರತಿ ಎರಡು ವರ್ಷಗಳಿಗೊಮ್ಮೆ ನಡೆಯುವ ಜಗತ್ತಿನ ಅತಿ ದೊಡ್ಡ ವೃತ್ತಿಪರ ಕೌಶಲ್ಯ ಸ್ಪರ್ಧೆಯಾಗಿದ್ದು, ಮುಂದಿನ ವರ್ಲ್ಡ್ ಸ್ಕಿಲ್ 2028 ಜಾಗತಿಕ ಸ್ಪರ್ಧೆಯು ಜಪಾನಿನ ಐಚಿ ನಗರದಲ್ಲಿ ನಡೆಯಲಿದೆ.

ಕರ್ನಾಟಕ ರಾಜ್ಯ ಕೌಶಲ್ಯ ಒಲಿಂಪಿಕ್ಸ್ 2026–27 ಅನ್ನು ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ ಆಯೋಜಿಸುತ್ತಿದೆ. ಜಪಾನಿನ ಐಚಿಯಲ್ಲಿ ನಡೆಯಲಿರುವ ವರ್ಲ್ಡ್ ಸ್ಕಿಲ್ 2028 ಜಾಗತಿಕ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಲು ಬಯಸುವ ಯುವಕ–ಯುವತಿಯರಿಗೆ ಇದೊಂದು ಅಧಿಕೃತ ರಾಜ್ಯ ಮಟ್ಟದ ವೇದಿಕೆಯಾಗಿದೆ.

ಸ್ಪರ್ಧೆಯಲ್ಲಿ 63 ವಿವಿಧ ವೃತ್ತಿಪರ ಕೌಶಲ್ಯ ವಿಭಾಗಗಳಲ್ಲಿ ನೈಪುಣ್ಯತೆ ಹೊಂದಿರುವ 16 ರಿಂದ 25 ವರ್ಷ ವಯೋಮಿತಿಯ ಯುವಜನರು ಭಾಗವಹಿಸಬಹುದು. ಅತ್ಯುತ್ತಮ ಪ್ರದರ್ಶನ ನೀಡುವ ಅಭ್ಯರ್ಥಿಗಳಿಗೆ ನಗದು ಬಹುಮಾನಗಳು ಹಾಗೂ ಉಚಿತವಾಗಿ ಉನ್ನತ ಮಟ್ಟದ ಸುಧಾರಿತ ತರಬೇತಿಯನ್ನು ನೀಡಲಾಗುತ್ತದೆ. ರಾಜ್ಯಮಟ್ಟದಲ್ಲಿ ವಿಜೇತರಾದವರು ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮ ಆಯೋಜಿಸುವ ಪ್ರಾದೇಶಿಕ ಹಾಗೂ ರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಿಗೆ ಅಯ್ಕೆಯಾಗುತ್ತಾರೆ. ಅಲ್ಲಿ ಗೆದ್ದು ಅಂತಿಮವಾಗಿ ಜಾಗತಿಕ ಮಟ್ಟದಲ್ಲಿ ಟೀಮ್ ಇಂಡಿಯಾ ಪ್ರತಿನಿಧಿಸುವ ಸುವರ್ಣಾವಕಾಶ ಪಡೆಯುತ್ತಾರೆ.

ನೋಂದಣಿ ದಿನಾಂಕವನ್ನು ಅಕ್ಟೋಬರ್ 19 ವರೆಗೆ ವಿಸ್ತರಿಸಲಾಲಾಗಿದ್ದು, ಜಿಲ್ಲೆಯ ಎಲ್ಲಾ ಆಸಕ್ತ ಯುವಕ–ಯುವತಿಯರು ಮತ್ತು ವಿದ್ಯಾರ್ಥಿಗಳು www.skillindiadigital.gov.in/home ವೆಬ್ ಪೋರ್ಟಲ್ ನಲ್ಲಿ ನೋಂದಣಿ ಮಾಡಿಕೊಳ್ಳುವುದರ ಮೂಲಕ ಸ್ಪರ್ಧೆಯಲ್ಲಿ ಭಾಗವಹಿಸಿ ಈ ಮಹತ್ವದ ಅವಕಾಶವನ್ನು ಬಳಸಿಕೊಳ್ಳಬೇಕು ಎಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಾಹಿತಿ ಹಕ್ಕು ಕಾಯ್ದೆ ಆಶಯದಂತೆ ಆಯೋಗ ಕೆಲಸ: ಬಿ.ವೆಂಕಟ ಸಿಂಗ್

ರಾಯಚೂರು ,14–ಮಾಹಿತಿ ಹಕ್ಕು ಕಾಯ್ದೆಯ ಆಶಯದಂತೆ ಸಾರ್ವಜನಿಕರಿಗೆ ತಲುಪಿಸುವ ನಿಟ್ಟಿನಲ್ಲಿ ಆಯೋಗ ತಂಡವಾಗಿ ಕೆಲಸ ಮಾಡುತ್ತಿದೆ ಎಂದು ಕರ್ನಾಟಕ ಮಾಹಿತಿ ಆಯೋಗದ ಕಲ್ಬುರ್ಗಿ ಪೀಠದ ರಾಜ್ಯ ಮಾಹಿತಿ ಆಯುಕ್ತರಾದ ಬಿ.ವೆಂಕಟ ಸಿಂಗ್ ಸಲಹೆ ಮಾಡಿದರು.

ಸೋಮವಾರ ಸಂಜೆ ಕರ್ನಾಟಕ ಮಾಹಿತಿ ಆಯೋಗದ ಕಲ್ಬುರ್ಗಿ ಪೀಠದಲ್ಲಿ ಆಯೋಜಿಸಿದ ಮಾಹಿತಿ ಹಕ್ಕು ಕಾಯ್ದೆ ದಿನಾಚರಣೆಯಲ್ಲಿ ಮಾತನಾಡಿದರ ಅವರು ಮಾಹಿತಿ ಹಕ್ಕು ಕಾಯ್ದೆ ಆಡಳಿತದಲ್ಲಿ ಜನ ಸಾಮಾನ್ಯರಿಗೆ ಸಹಭಾಗಿತ್ವ ನೀಡುವ ಕಾಯ್ದೆಯಾಗಿದೆ ಆಡಳಿತದಲ್ಲಿ ಪಾರದರ್ಶಕತೆ, ಭ್ರಷ್ಟಚಾರ ನಿಯಂತ್ರಣ ಕಾಯ್ದುಕೊಳ್ಳುವುದರ ಮೇಲೆ ನಾಗರಿಕ ನಿಗಾ ಇಡಲು ಪೂರಕವಾಗಿದೆ ಎಂದು ಹೇಳಿದರು.

ಅಕ್ಟೋಬರ್–12, 2005 ರಲ್ಲಿ ಈ ಕಾಯ್ದೆ ದೇಶದಲ್ಲಿ ಜಾರಿಗೆ ಬಂದ ಬಳಿಕ ಆಡಳಿತದಲ್ಲಿ ಸುಧಾರಣೆ ತಂದು ಅಧಿಕಾರಿಗಳನ್ನು ಉತ್ತರದಾಯಿಗಳನ್ನಾಗಿ ಮಾಡುವಲ್ಲಿ ಕಾಯ್ದೆ ಕೆಲಸ ಮಾಡಿದೆ, ಆದರೂ ಸರ್ಕಾರಿ ಅಧಿಕಾರಿಗಳು ಇನ್ನೂ ಪರಿಣಾಮಕಾರಿಯಾಗಿ ಕೆಲಸ ಮಾಡುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿ ಬೇಕಾಗಿದೆ. ಎಂದು ಸೂಚನೆ ನೀಡಿದರು. ಕಲ್ಬುರ್ಗಿ ಪೀಠದಲ್ಲಿ ಪ್ರಕರಣಗಳ ವಿಚಾರಣೆ ಮತ್ತು ವಿಲೇವಾರಿ ತ್ವರಿತಗತಿಯಲ್ಲಿ ನಡೆಯುತ್ತಿದೆ ಮಾಹಿತಿ ಹಕ್ಕು ಕಾಯ್ದೆಯ ಆಶಯದ ಪೂರಕವಾಗಿ ಆಯೋಗದ ಎಲ್ಲಾ ಅಧಿಕಾರಿಗಳು ಒಂದು ತಂಡವಾಗಿ ಕೆಲಸ ನಿರ್ವಹಿಸುತ್ತಿದೆ ಇನ್ನೂ ಹೆಚ್ಚಿನ ರೀತಿಯಲ್ಲಿ ಜನರಿಗೆ ಕಾಯ್ದೆ ಲಾಭಪಡೆಯಲು ಅನುಕೂಲವಾಗುವಂತೆ ಕಾರ್ಯಪ್ರವೃತ್ತರಾಗಬೇಕು ಎಂದು ಸಲಹೆ ಮಾಡಿದರು.

ಆರಂಭದಲ್ಲಿ ಪೀಠದ ಕಾನೂನು ಸಹಾಯಕಿ ಪೂಜಾ ಆರ್., ಪ್ರಸ್ತಾವಿಕ ಮಾತನಾಡಿದರು. ಕೊನೆಯಲ್ಲಿ ಶಾಖಾಧಿಕಾರಿ ಶಿವಕುಮಾರ ವಂದಿಸಿದರು ಈ ವೇಳೆ ಪೀಠದ ಸಿಬ್ಬಂದಿ ಹಾಜರಿದ್ದರು.

## ಅಕ್ಟೋಬರ್ 15ರವರೆಗೆ ರಾಷ್ಟ್ರೀಯ ಅಂಚೆ ಸಪ್ತಾಹ ಕಾರ್ಯಕ್ರಮ

ರಾಯಚೂರು ,14– ಭಾರತೀಯ ಅಂಚೆ ಇಲಾಖೆಯು ಪ್ರತಿ ವರ್ಷ ಆಚರಿಸುವಂತೆ ಈ ವರ್ಷವೂ ಅಕ್ಟೋಬರ್ 15ರವರೆಗೆ ವಿಶ್ವ ಅಂಚೆ ದಿನ ಮತ್ತು ರಾಷ್ಟ್ರೀಯ ಅಂಚೆ ಸಪ್ತಾಹ – 2026” ಅನ್ನು ರಾಯಚೂರು ವಿಭಾಗದಲ್ಲಿ ಆಚರಿಸಲಿದೆ. ಈ ವರ್ಷದ ವಿಶ್ವ ಅಂಚೆ ದಿನದ ಘೋಷವಾಕ್ಯ: ಒಂದು ಅಂಚೆ ಜಾಲ, ಅನಂತ ಸಾಧ್ಯತೆಗಳು. ಜನರ ದೈನಂದಿನ ಜೀವನದಲ್ಲಿ ಮತ್ತು ವ್ಯವಹಾರದಲ್ಲಿ ಅಂಚೆಯ ಪಾತ್ರ, ಜಾಗತಿಕ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಅದರ ಕೊಡುಗೆಯ ಬಗ್ಗೆ ಜಾಗೃತಿ ಮೂಡಿಸುವುದು ಈ ಆಚರಣೆಯ ಉದ್ದೇಶವಾಗಿದೆ.

ಅಂಚೆ ಇಲಾಖೆಯಲ್ಲಿ ಬಹಳಷ್ಟು ಬದಲಾವಣೆಗಳಾಗುತ್ತಿವೆ. ಹಣಕಾಸು ಸೇವೆಗಳು, ಉಳಿತಾಯ ಖಾತೆ, ಅಲ್ಪ ಉಳಿತಾಯ ಯೋಜನೆಗಳಾದ ಆರ್‌ಡಿ, ಟಿಡಿ, ಪಿಪಿಎಫ್, ಎನ್.ಎಸ್.ಸಿ, ಕೆವಿಪಿ, ಸುಕನ್ಯಾ ಸಮೃದ್ಧಿ ಯೋಜನೆ, ಎಲ್ಲ ಅಂಚೆ ಕಚೇರಿಗಳಲ್ಲಿ ಲಭ್ಯವಿವೆ. ಡಿಜಿಟಲ್ ವ್ಯವಸ್ಥೆಗಳಾದ ನೆಟ್ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್, ಸೇವೆಗಳು ಲಭ್ಯವಿವೆ. ಪಿಎಮ್‌ಎಸ್‌ಬಿವೈ ಕೇವಲ ರೂ.20/–, ಪಿಎಮ್‌ಜೆಜೆಬಿವೈ ರೂ.420/– ಪಾವತಿಸಿದರೆ ರೂ.2 ಲಕ್ಷ ವಿಮೆ ಸಿಗುತ್ತದೆ. ಜೊತೆಗೆ ಐಪಿಪಿಬಿ ಪ್ ಮೂಲಕ ಎಲ್ಲ ಸೇವೆಗಳಿಗೆ ಹಣ ವರ್ಗಾವಣೆ, ಫೋನ್ ಪ್ಲೇ ಹಾಗೂ ಗೂಗಲ್ ಪ್ಲೇ ಮೂಲಕ ಪೋಸ್ಟಲ್ ಲೈಫ್ ಇನ್ಶೂರೆನ್ಸ್ ಪಾವತಿಸಲು ಅವಕಾಶವಿದೆ.ಜೀವವಿಮೆಗಳು, ಅಂಚೆ ಜೀವ ವಿಮೆ ಹಾಗೂ ಗ್ರಾಮೀಣ ಅಂಚೆ ಜೀವ ವಿಮೆ, ಆಧಾರ್ ನೋಂದಣಿ ಮತ್ತು ತಿದ್ದುಪಡಿ, ತ್ವರಿತ ತಪಾಲುಗಳ ವಿಲೇವಾರಿ ಸೇವೆಗಳು ಲಭ್ಯವಿವೆ. ಉಳಿತಾಯ ಮನೋಭಾವನೆ ಇಟ್ಟುಕೊಳ್ಳುವುದು ಇಂದಿನ ಕಾಲಘಟ್ಟದಲ್ಲಿ ಅತೀ ಪ್ರಮುಖವಾದುದು. ನಾವು ಮಾಡುವ ಹಣಕಾಸು ಉಳಿತಾಯ ಮುಂದೊಂದು ದಿನ ನಮಗೆ ಸೂಕ್ತ ಸಮಯದಲ್ಲಿ ವರದಾನವಾಗಿ ಮರುಕಳಿಸುತ್ತದೆ. ಹಾಗಾಗಿ, ಎಲ್ಲರಿಗೂ ಒಪ್ಪುವಂತಹ ಸೇವೆಗಳು ನಮ್ಮಲ್ಲಿವೆ, ಒಮ್ಮೆ ತಮ್ಮ ಹತ್ತಿರದ ಅಂಚೆ ಕಚೇರಿಗೆ ಭೇಟಿ ನೀಡಬಹುದಾಗಿದೆ ಎಂದು ಅಂಚೆ ಅಧೀಕ್ಷಕರಾದ ಶಿವಾನಂದ ಆರ್.ಎಚ್ ಅವರು ತಿಳಿಸಿದ್ದಾರೆ.

## ಭಾರತಕ್ಕೆ ಭೇಟಿ ನೀಡಲಿದ್ದಾರೆ ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ: ಜಾಮ್‌ನಗರದಲ್ಲಿ ಮಹತ್ವದ ಸಭೆಗಳು, ಇಂಧನ ಒಪ್ಪಂದಕ್ಕೆ ಒತ್ತು



ನವದೆಹಲಿ,14– ಅಮೆರಿಕ ಮತ್ತು ಭಾರತ ನಡುವಿನ ಕಾರ್ಯತಂತ್ರದ ಪಾಲುದಾರಿಕೆ, ಜಾಗತಿಕ ರಾಜತಾಂತ್ರಿಕ ಸಮೀಕರಣಗಳು ಹಾಗೂ ಇಂಧನ ಸಹಕಾರವನ್ನು ಇನ್ನಷ್ಟು ಗಟ್ಟಿಗೊಳಿಸುವ ಉದ್ದೇಶದಿಂದ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಅವರು ಅಕ್ಟೋಬರ್ 17 ಭಾರತಕ್ಕೆ ಅಧಿಕೃತ ಭೇಟಿ ನೀಡಲಿದ್ದು, 22 ರವರೆಗೆ ಇರಲಿದ್ದಾರೆ. ತಮ್ಮ ಈ ಪ್ರವಾಸದಲ್ಲಿ ಅವರು ದೇಶದ ವಾಣಿಜ್ಯ ರಾಜಧಾನಿ ಮುಂಬೈ ಹಾಗೂ ಗುಜರಾತ್‌ನ ಕೈಗಾರಿಕಾ ಕೇಂದ್ರ ಜಾಮ್‌ನಗರಕ್ಕೆ ತೆರಳಿ ಉನ್ನತ ಸರ್ಕಾರಿ ಅಧಿಕಾರಿಗಳು ಮತ್ತು ಪ್ರಮುಖ ಉದ್ಯಮ ನಾಯಕರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ.ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಅಕ್ಟೋಬರ್ 17–22 ರಂದು ಭಾರತಕ್ಕೆ ಭೇಟಿ ನೀಡಲಿದ್ದಾರೆ. ಮುಂಬೈ ಮತ್ತು ಜಾಮ್‌ನಗರದಲ್ಲಿ ನಡೆಯುವ ಈ ಭೇಟಿಯು ಅಮೆರಿಕ–ಭಾರತದ ಕಾರ್ಯತಂತ್ರದ ಪಾಲುದಾರಿಕೆ, ವ್ಯಾಪಾರ, ಇಂಧನ ಸಹಕಾರ ಮತ್ತು ಹೂಡಿಕೆಯನ್ನು ಗಟ್ಟಿಗೊಳಿಸುವ ಉದ್ದೇಶ ಹೊಂದಿದೆ. ಜಾಗತಿಕ ರಾಜತಾಂತ್ರಿಕ ಮತ್ತು ಪ್ರಾದೇಶಿಕ ಭದ್ರತೆಯ ಕುರಿತು ಚರ್ಚೆ ನಡೆಯಲಿದ್ದು, ಮಧ್ಯ ಏಷ್ಯಾ ನಾಯಕರೊಂದಿಗೆ ಸಭೆ ಸಹ ಇರಲಿದೆ.

ಮೇ ತಿಂಗಳಲ್ಲಿ ನವದೆಹಲಿಯಲ್ಲಿ ನಡೆದ ಕ್ವಾಡ್ ವಿದೇಶಾಂಗ ಸಚಿವರ ಸಮಾವೇಶದಲ್ಲಿ ಭಾಗವಹಿಸಿದ ಬಳಿಕ, ರೂಬಿಯೊ ಅವರ ಎರಡನೇ ಪ್ರಮುಖ ಭಾರತ ಭೇಟಿ ಇದಾಗಿದೆ. ವಾಷಿಂಗ್ಟನ್‌ನ ಅಧಿಕೃತ ಪ್ರಕಟಣೆಯಂತೆ, ಉಭಯ ದೇಶಗಳ ನಡುವಿನ ಕಾರ್ಯತಂತ್ರದ ಮೈತ್ರಿ, ಇಂಡೋ–ಪೆಸಿಫಿಕ್ ವಲಯದ ಪ್ರಾದೇಶಿಕ ಭದ್ರತೆ ಹಾಗೂ ಪ್ರಸ್ತುತ ಜಾಗತಿಕ ಭೌಗೋಳಿಕ ರಾಜಕೀಯ ಬೆಳವಣಿಗೆಗಳ ಕುರಿತು ಹಿರಿಯ ಅಧಿಕಾರಿಗಳೊಂದಿಗೆ ಅಭಿಪ್ರಾಯ ವಿನಿಮಯ ಮಾಡಿಕೊಳ್ಳಲಿದ್ದಾರೆ.

ವಾಣಿಜ್ಯ ಹೂಡಿಕೆ ವಿಸ್ತರಣೆ: ಭಾರತ ಮತ್ತು ಅಮೆರಿಕದ ನಡುವಿನ ಆರ್ಥಿಕ ಬಾಂಧವ್ಯವನ್ನು ವಿಸ್ತರಿಸಲು ಹಾಗೂ ಉಭಯ ದೇಶಗಳಲ್ಲಿ ಖಾಸಗಿ ಹೂಡಿಕೆಯನ್ನು ಉತ್ತೇಜಿಸಲು ಭಾರತೀಯ ಉದ್ಯಮ ದಿಗ್ಗಜರನ್ನು ರೂಬಿಯೊ ಭೇಟಿಯಾಗಲಿದ್ದಾರೆ.

ಇಂಧನ ಪಾಲುದಾರಿಕೆ: ಜಾಗತಿಕ ಕಚ್ಚಾ ತೈಲ ಪೂರೈಕೆ, ಪೆಟ್ರೋಕೆಮಿಕಲ್ ಸಹಕಾರ ಮತ್ತು ನವೀಕರಿಸಬಹುದಾದ ಇಂಧನ ಕ್ಷೇತ್ರಗಳಲ್ಲಿ ಜಂಟಿ ಯೋಜನೆಗಳನ್ನು ರೂಪಿಸುವುದು ಈ ಭೇಟಿಯ ಪ್ರಮುಖ ಉದ್ದೇಶವಾಗಿದೆ.

ಮಧ್ಯ ಏಷ್ಯಾ ನಾಯಕರ ಭೇಟಿ: ಉಜ್ಬೇಕಿಸ್ತಾನ್, ಕಝಾಕಿಸ್ತಾನ್, ತಜಿಕಿಸ್ತಾನ್, ತುರ್ಕಮೆನಿಸ್ತಾನ್ ಮತ್ತು ಕಿರ್ಗಿಜ್ ಗಣ–ರಾಜ್ಯದ ಸಚಿವರೊಂದಿಗೆ ಅವರು ಸಮಾಲೋಚನೆ ನಡೆಸಲಿದ್ದಾರೆ. ಅಮೆರಿಕ ಮತ್ತು ಮಧ್ಯ ಏಷ್ಯಾದ ನಡುವೆ ವಾಣಿಜ್ಯ ಪಾಲುದಾರಿಕೆಯನ್ನು ವಿಸ್ತರಿಸಲು 200ಕ್ಕೂ ಹೆಚ್ಚು ಅಮೆರಿಕನ್ ಉದ್ಯಮಿಗಳ ಬೃಹತ್ ವಾಣಿಜ್ಯ ನಿಯೋಗವೂ ರೂಬಿಯೊ ಜೊತೆಗಿರಲಿದೆ.

ತೈಲ ಮಾರುಕಟ್ಟೆ ಸ್ಥಿರತೆ: ಇತ್ತೀಚೆಗೆ ಮಧ್ಯಪ್ರಾಚ್ಯದಲ್ಲಿ ಸೌದಿ ಅರೇಬಿಯಾದ ವಿಮಾನ ನಿಲ್ದಾಣ ಮತ್ತು ತೈಲ ನೆಲೆಗಳ ಮೇಲೆ ಹೌತಿ ಬಂಡುಕೋರರು ಕ್ಷಿಪಣಿ ದಾಳಿ ತೀವ್ರಗೊಳಿಸಿರುವ ಬೆನ್ನಲ್ಲೇ, ಜಾಗತಿಕ ಇಂಧನ ಪೂರೈಕೆ ಸರಪಳಿಯನ್ನು ಸುರಕ್ಷಿತವಾಗಿರಿಸಲು ಅಮೆರಿಕವು ಭಾರತದಂತಹ ಪ್ರಮುಖ ಸಂಸ್ಕರಣಾ ಪಾಲುದಾರರೊಂದಿಗೆ ನಿಕಟ ಸಹಕಾರವನ್ನು ಬಯಸುತ್ತಿದೆ.

ಭಾರತ–ಅಮೆರಿಕ ವ್ಯಾಪಾರ ಒಪ್ಪಂದ: ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಇತ್ತೀಚೆಗಷ್ಟೇ ಉಭಯ ದೇಶಗಳ ನಡುವಿನ ವ್ಯಾಪಾರ ಮಾತುಕತೆಗಳು ಅಂತಿಮ ಘಟ್ಟವನ್ನು ಸಮೀಪಿಸುತ್ತಿವೆ ಎಂದು ತಿಳಿಸಿದ್ದು, ರೂಬಿಯೊ ಅವರ ಈ ಭೇಟಿಯು ಮುಂಬರುವ ಒಪ್ಪಂದಗಳಿಗೆ ಮಹತ್ವದ ವೇದಿಕೆಯಾಗಲಿದೆ.

## ಬರ ಪರಿಹಾರ ಹೆಚ್ಚಿಸಿ, ರೈತರ ನೆರವಿಗೆ ಧಾವಿಸಲು ಕರ್ನಾಟಕ ಕಾಂಗ್ರೆಸ್ ಸರ್ಕಾರಕ್ಕೆ ಸೂಚಿಸಿ: ರಾಹುಲ್ ಗಾಂಧಿಗೆ ಅಶೋಕ್ ಆಗ್ರಹ



ಬೆಂಗಳೂರು, 14–ಕರ್ನಾಟಕದ ಬರ ಪರಿಸ್ಥಿತಿಯ ತೀವ್ರತೆಯನ್ನು ಅರಿಯಲು ರಾಜ್ಯಕ್ಕೆ ಭೇಟಿ ನೀಡಿ, ರೈತರಿಗೆ ಹೆಚ್ಚಿನ ಪರಿಹಾರ ಒದಗಿಸುವಂತೆ ಕಾಂಗ್ರೆಸ್ ನಾಯಕ ಹಾಗೂ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಆಗ್ರಹಿಸಿದ್ದಾರೆ. ಈ ಸಂಬಂಧ ಪತ್ರ ಬರೆದಿರುವ ಅವರು, ಬರ ಪರಿಹಾರ ವಿತರಣೆಯಲ್ಲಿ ರಾಜ್ಯ ಸರ್ಕಾರ ವಿಳಂಬ ಮಾಡುತ್ತಿದೆ ಎಂದು ಆರೋಪಿಸಿದ್ದು, ತಕ್ಷಣ ಸಮರೋಪಾದಿಯಲ್ಲಿ ಪರಿಹಾರ ಕಾರ್ಯ ಕೈಗೊಳ್ಳುವಂತೆ ಸೂಚಿಸಬೇಕು ಎಂದು ಮನವಿ ಮಾಡಿದ್ದಾರೆ.

ಕರ್ನಾಟಕವು ಇತ್ತೀಚಿನ ವರ್ಷಗಳಲ್ಲೇ ತೀವ್ರ ಬರ ಪರಿಸ್ಥಿತಿ ಎದುರಿಸುತ್ತಿದೆ. ನೈಋತ್ಯ ಮುಂಗಾರು ಮಳೆಯಲ್ಲಿ ಶೇ 35ರಷ್ಟು ಕೊರತೆ–ಯಾಗಿದ್ದು, ರಾಜ್ಯ ಸರ್ಕಾರ 217 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಿದೆ. ಸುಮಾರು 47.09 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟವಾಗಿದ್ದು, ಅಂದಾಜು 46,324.50 ಕೋಟಿ ನಷ್ಟ ಸಂಭವಿಸಿದೆ ಎಂದು ಅಶೋಕ್ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.ಕರ್ನಾಟಕದ ಬರ ಪರಿಸ್ಥಿತಿಯ ತೀವ್ರತೆಯನ್ನು ಅರಿಯಲು ರಾಜ್ಯಕ್ಕೆ ಭೇಟಿ ನೀಡಿ ರೈತರಿಗೆ ಹೆಚ್ಚಿನ ಪರಿಹಾರ ಒದಗಿಸುವಂತೆ ರಾಹುಲ್ ಗಾಂಧಿಗೆ ಆರ್. ಅಶೋಕ್ ಪತ್ರ ಬರೆದಿದ್ದಾರೆ. ಪ್ರತಿ ರೈತನಿಗೆ 2,500 ಪರಿಹಾರ ಸಾಕಾಗುವುದಿಲ್ಲ ಎಂದು ಟೀಕಿಸಿರುವ ಅವರು, ಬರ ಪರಿಹಾರ ವಿತರಣೆ ಚುರುಕುಗೊಳಿಸಲು ರಾಜ್ಯ ಸರ್ಕಾರಕ್ಕೆ ಸೂಚಿಸುವಂತೆ ಆಗ್ರಹಿಸಿದ್ದಾರೆ.

ಕಾಂಗ್ರೆಸ್ ಸರ್ಕಾರದ ನಡೆಯ ಬಗ್ಗೆ ಅಶೋಕ್ ಆಕ್ಷೇಪ ಇಷ್ಟೊಂದು ದೊಡ್ಡ ಪ್ರಮಾಣದ ಬೆಳೆ ನಷ್ಟವಾಗಿದ್ದರೂ, ರಾಜ್ಯ ಸರ್ಕಾರ ಪ್ರತಿ ರೈತನಿಗೆ ಕೇವಲ 2,500 ಇನ್‌ಪುಟ್ ಸಬ್ಸಿಡಿ ಘೋಷಿಸಿರುವುದು ಸಮರ್ಪಕವಲ್ಲ ಎಂದು ಅವರು ಟೀಕಿಸಿದ್ದಾರೆ. ಬೆಳೆ ನಷ್ಟ, ಹೆಚ್ಚುತ್ತಿರುವ ಕೃಷಿ ಸಾಲ ಮತ್ತು ಉತ್ಪಾದನಾ ವೆಚ್ಚಗಳನ್ನು ಗಮನಿಸಿದರೆ, ರೈತರಿಗೆ ಹೆಚ್ಚಿನ ನೆರವು ನೀಡಬೇಕಿದೆ. ನಾಲ್ಕು ತಿಂಗಳು ಕಳೆದರೂ ರೈತರಿಗೆ ಸಮರ್ಪಕ ಪರಿಹಾರ ತಲುಪಿಲ್ಲ ಎಂದು ಆರೋಪಿಸಿದ್ದಾರೆ.

ಬಿಜೆಪಿ ಸರ್ಕಾರದ ವೇಳ ಕೊಟ್ಟಿದ್ದ ಪರಿಹಾರದ ಅಂಕಿ–ಅಂಶ ಉಲ್ಲೇಖ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಬರ ಪರಿಸ್ಥಿತಿಯ ಸಂದರ್ಭದಲ್ಲಿ ಹೆಚ್ಚಿನ ಪರಿಹಾರ ನೀಡಲಾಗಿತ್ತು ಎಂದು ಅಶೋಕ್ ಪತ್ರದಲ್ಲಿ ತಿಳಿಸಿದ್ದಾರೆ. 2019–20ರಿಂದ 2022–23ರ ಅವಧಿಯಲ್ಲಿ 57.43 ಲಕ್ಷ ಹೆಕ್ಟೇರ್ ಬೆಳೆ ನಷ್ಟಕ್ಕೆ ಸಂಬಂಧಿಸಿದಂತೆ 51.90 ಲಕ್ಷ ರೈತರಿಗೆ ಒಟ್ಟು 6,651.15 ಕೋಟಿ ಇನ್‌ಪುಟ್ ಸಬ್ಸಿಡಿ ವಿತರಿಸಲಾಗಿತ್ತು ಎಂದು ಹೇಳಿದ್ದಾರೆ.

ಆ ಅವಧಿಯಲ್ಲಿ ಮಳೆಯಾಶ್ರಿತ ಬೆಳೆಗಳಿಗೆ ಪ್ರತಿ ಹೆಕ್ಟೇರ್‌ಗೆ 13,600, ನೀರಾವರಿ ಬೆಳೆಗಳಿಗೆ 25,000 ಹಾಗೂ ಬಹುವಾರ್ಷಿಕ ಬೆಳೆಗಳಿಗೆ 28,000 ಪರಿಹಾರ ನೀಡಲಾಗಿತ್ತು ಎಂದು ಉಲ್ಲೇಖಿಸಿದ್ದಾರೆ. ಹಿಂದಿನ ಸರ್ಕಾರದ ಅವಧಿಯಲ್ಲಿ ಹೆಚ್ಚಿನ ನೆರವು ನೀಡಲು ಸಾಧ್ಯವಾಗಿದ್ದರೆ, ಈಗಿನ ಸರ್ಕಾರ ಏಕೆ ಹೆಚ್ಚಿನ ಪರಿಹಾರ ನೀಡುತ್ತಿಲ್ಲ ಎಂದು ಪ್ರಶ್ನಿಸಿದ್ದಾರೆ.

ರಾಹುಲ್ ಗಾಂಧಿ ಮಧ್ಯಪ್ರವೇಶಕ್ಕೆ ಆಗ್ರಹ ಬರಪೀಡಿತ ತಾಲೂಕುಗಳನ್ನು ಗುರುತಿಸುವಲ್ಲಿ ವಿಳಂಬವಾಗಿರುವುದರಿಂದ ರೈತರ ಸಂಕಷ್ಟ ಹೆಚ್ಚಾಗಿದೆ ಎಂದು ಅಶೋಕ್ ಆರೋಪಿಸಿದ್ದಾರೆ. ಬರ ಘೋಷಣೆ ಮತ್ತು ಪರಿಹಾರ ವಿತರಣೆಯಲ್ಲಿ ವಿಳಂಬವಾಗುತ್ತಿರುವ ಕುರಿತು ಕಾಂಗ್ರೆಸ್ ಶಾಸಕರೂ ಕಳವಳ ವ್ಯಕ್ತಪಡಿಸಿದ್ದಾರೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಬೆಳೆ ನಷ್ಟದ ಪ್ರಮಾಣಕ್ಕೆ ಅನುಗುಣವಾಗಿ ಹೆಚ್ಚಿನ ಪರಿಹಾರ ನೀಡುವುದು, ಕುಡಿಯುವ ನೀರು ಮತ್ತು ಮೇವು ಕೊರತೆ ನೀಗಿಸುವುದು, ಜಾನುವಾರುಗಳನ್ನು ರಕ್ಷಿಸುವುದು ಹಾಗೂ ಯಾವುದೇ ರೈತ ಪರಿಹಾರದಿಂದ ವಂಚಿತರಾಗದಂತೆ ಕಾಲಮಿತಿಯ ಕಾರ್ಯಯೋಜನೆ ರೂಪಿಸುವುದು ಸೇರಿದಂತೆ ಹಲವು ವಿಚಾರಗಳಿಗೆ ರಾಜ್ಯ ಸರ್ಕಾರ ಉತ್ತರ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ರಾಹುಲ್ ಗಾಂಧಿ ಅವರು ಬರಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ರೈತರನ್ನು ನೇರವಾಗಿ ಭೇಟಿಯಾಗಬೇಕು. ತಮ್ಮದೇ ಪಕ್ಷದ ಸರ್ಕಾರದಿಂದ ಉತ್ತರ ಕೇಳಿ, ರೈತರಿಗೆ ಸಮರ್ಪಕ ಹಾಗೂ ಸಕಾಲಿಕ ಪರಿಹಾರ ಒದಗಿಸುವಂತೆ ಸೂಚಿಸಬೇಕು ಎಂದು ಆರ್. ಅಶೋಕ್ ಪತ್ರದಲ್ಲಿ ಒತ್ತಾಯಿಸಿದ್ದಾರೆ.

## ಮಣ್ಣಿನ ತೇವಾಂಶಕ್ಕೆ ಅನುಗುಣವಾಗಿ ಬೆಳೆ, ಸೂಕ್ತ ತಳಿಗಳ ಆಯ್ಕೆಗೆ ಮಾಡಿ

ಕೊಪ್ಪಳ,14– 2026–27ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ ರೈತರು ಉತ್ತಮ ಇಳುವರಿ ಪಡೆಯಲು ಜಮೀನಿನ ತೇವಾಂಶ, ಸೂಕ್ತ ಬೆಳೆ ಹಾಗೂ ಶಿಫಾರಸು ಮಾಡಿದ ತಳಿಗಳ ಆಯ್ಕೆ ಮಾಡಿಕೊಳ್ಳುವಂತೆ ಕೊಪ್ಪಳ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಸಲಹೆ ನೀಡಿದ್ದಾರೆ.

ಕೊಪ್ಪಳ ಜಿಲ್ಲೆಯ ರೈತರು ಹಿಂಗಾರು ಹಂಗಾಮಿನಲ್ಲಿ ಉತ್ತಮ ಇಳುವರಿ ಪಡೆಯಲು ಭೂಮಿಯಲ್ಲಿರುವ ತೇವಾಂಶವನ್ನು ಗಮನಿಸಿ ಬೆಳೆ ಆಯ್ಕೆ ಮಾಡುವುದು, ಸೂಕ್ತ ತಳಿಗಳ ಆಯ್ಕೆ, ಸರಿಯಾದ ಬಿತ್ತನೆ ವಿಧಾನ ಹಾಗೂ ಬಿತ್ತನೆಗೂ ಮುನ್ನ ಮತ್ತು ನಂತರ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುವುದು ಅತ್ಯಂತ ಮುಖ್ಯ. ಕೊಪ್ಪಳ ಜಿಲ್ಲೆಯ ಹಿಂಗಾರು ಹಂಗಾಮಿನಲ್ಲಿ ಮಳೆಯ ಅನಿಶ್ಚಿತತೆ, ಮಣ್ಣಿನ ತೇವಾಂಶದ ಕೊರತೆ ಹಾಗೂ ಒಣ ಹವಾಮಾನದ ಸಾಧ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಅಗತ್ಯ ಕೃಷಿ ಕ್ರಮಗಳನ್ನು ಅನುಸರಿಸಬಹುದು.

*ಭೂಮಿಯ ಹಸಿ ಮತ್ತು ಮಣ್ಣಿನ ತೇವಾಂಶಕ್ಕೆ ಅನುಗುಣವಾಗಿ ಬೆಳೆ ಆಯ್ಕೆ:* ಜಿಲ್ಲೆಯ ವಿವಿಧ ಭಾಗಗಳಲ್ಲಿ ಮಳೆಯ ಹಂಚಿಕೆ, ಮಣ್ಣಿನ ವಿಧ, ಮಣ್ಣಿನಲ್ಲಿ ಉಳಿದಿರುವ ತೇವಾಂಶ ಹಾಗೂ ನೀರಾವರಿ ಲಭ್ಯತೆಯಲ್ಲಿ ವ್ಯತ್ಯಾಸವಿರುವುದರಿಂದ ಎಲ್ಲ ರೈತರೂ ಒಂದೇ ರೀತಿಯ ಬೆಳೆ ಪದ್ಧತಿಯನ್ನು ಅನುಸರಿಸುವುದು ಸೂಕ್ತವಲ್ಲ. ರೈತರು ತಮ್ಮ ಹೊಲದ ಪರಿಸ್ಥಿತಿಯನ್ನು ಪರಿಶೀಲಿಸಿ, ಮಣ್ಣಿನ ತೇವಾಂಶಕ್ಕೆ ಹೊಂದುವ ಬೆಳೆಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಅನಗತ್ಯ ಕೃಷಿ ವೆಚ್ಚವನ್ನು ಕಡಿಮೆ ಮಾಡಿ, ಲಭ್ಯವಿರುವ ಮಳೆ ನೀರು ಮತ್ತು ನೀರಾವರಿ ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು.

*ಭೂಮಿಯ ಸ್ಥಿತಿಗೆ ತಕ್ಕಂತೆ ಬೆಳೆ ಆಯ್ಕೆ:* ಆಳವಾದ ಕಪ್ಪು ಮಣ್ಣು ಹೆಚ್ಚು ತೇವಾಂಶವಿರುವ ಭೂಮಿಯಲ್ಲಿ ಕಡಲೆ, ಜೋಳ, ಕುಸುಬೆ ಬೆಳೆಗಳನ್ನು ತೇವಾಂಶ ಉಳಿಯುವ ರೀತಿಯಲ್ಲಿ ಬಿತ್ತನೆ ಮಾಡಬೇಕು.

ಅದೇ ರೀತಿ ಮಧ್ಯಮ ಆಳದ ಕಪ್ಪು ಮಣ್ಣಿನಲ್ಲಿ ಕಡಲೆ, ಜೋಳ, ಕುಸುಬೆ ಬೆಳೆಗಳಿಗೆ ತೇವಾಂಶಕ್ಕೆ ಅನುಗುಣವಾಗಿ ಬಿತ್ತನೆ ಸಮಯ ನಿರ್ಧರಿಸಬೇಕು.

ಕೆಂಪು ಮಣ್ಣು ಅಥವಾ ಕಡಿಮೆ ತೇವಾಂಶವಿರುವ ಜಮೀನಿನಲ್ಲಿ ಕಡಿಮೆ ಅವಧಿಯ ತಳಿಗಳಾದ ಕಡಲೆ, ಜೋಳ ಹಾಗೂ ಸ್ಥಳೀಯ ಒಣಭೂಮಿ ಬೆಳೆಗಳಿಗೆ ಆದ್ಯತೆ ನೀಡಬೇಕು.

ತೇವಾಂಶ ಇಲ್ಲದ ಭೂಮಿಯಲ್ಲಿ ತಕ್ಷಣದ ಬಿತ್ತನೆ ತಪ್ಪಿಸಿ, ಮಳೆ ಬಂದು ಸಾಕಷ್ಟು ತೇವಾಂಶ ದೊರೆತ ನಂತರವೇ ಬಿತ್ತನೆ ಕೈಗೊಳ್ಳಬೇಕು.

ನೀರಾವರಿ ಸೌಲಭ್ಯವಿರುವ ಭೂಮಿಯಲ್ಲಿ ಮಣ್ಣಿನ ಗುಣ, ನೀರಿನ ಲಭ್ಯತೆ ಮತ್ತು ಬೆಳೆಯ ಅವಧಿಯನ್ನು ಗಮನಿಸಿ ಕಡಲೆ, ಜೋಳ ಮುಂತಾದ ಬೆಳೆಗಳನ್ನು ಆಯ್ಕೆ ಮಾಡಿಕೊಳ್ಳಬಹುದು.

*ಮುಖ್ಯ ಸೂಚನೆ:* ಮೇಲ್ಮೈ ಮಣ್ಣು ಸ್ವಲ್ಪ ತೇವವಾಗಿರುವುದನ್ನು ಮಾತ್ರ ನೋಡಿ ಬಿತ್ತನೆ ಮಾಡಬಾರದು. ಬೀಜ ಬಿತ್ತುವ ಆಳದಲ್ಲಿ ಮೊಳಕೆಯೊಡೆಯಲು ಮತ್ತು ಆರಂಭಿಕ ಬೆಳವಣಿಗೆಗೆ ಸಾಕಷ್ಟು ತೇವಾಂಶ ಇರಬೇಕು. ಮಣ್ಣಿನ ಆಳ, ಮಳೆ ಮತ್ತು ಬಿತ್ತನೆ ದಿನಾಂಕಕ್ಕೆ ಅನುಗುಣವಾಗಿ ನಿರ್ಧಾರ ತೆಗೆದುಕೊಳ್ಳಬೇಕು.

ಹಿಂಗಾರು ಬೆಳೆಗಳ ತಳಿಗಳ ಆಯ್ಕೆ: ಹಿಂಗಾರು ಜೋಳವು ಉತ್ತರ ಕರ್ನಾಟಕದ ಒಣಭೂಮಿ ಕೃಷಿ ವ್ಯವಸ್ಥೆಯಲ್ಲಿ ಪ್ರಮುಖ ಬೆಳೆಯಾಗಿದೆ. ವಿಶೇಷವಾಗಿ ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಮಧ್ಯಮದಿಂದ ಆಳವಾದ ಕಪ್ಪು ಮಣ್ಣಿನಲ್ಲಿ ಈ ಬೆಳೆಯನ್ನು ಸೂಕ್ತವಾಗಿ ಬೆಳೆಸಬಹುದು.

*ತಳಿಗಳ ಆಯ್ಕೆ:* ಸ್ಥಳೀಯ ಹವಾಗುಣಕ್ಕೆ ಹೊಂದುವ, ಬರವನ್ನು ತಡೆದುಕೊಳ್ಳುವ ಹಾಗೂ ಕೃಷಿ ಇಲಾಖೆಯಿಂದ ಶಿಫಾರಸು ಮಾಡಲಾದ ತಳಿಗಳನ್ನು ಆಯ್ಕೆ ಮಾಡಬೇಕು. ಹಿಂಗಾರು ಹಂಗಾಮಿನ ಜೋಳದಲ್ಲಿ ಎಮ್–35–1 ಮತ್ತು ಕೃವಿವಿ, ರಾಯಚೂರಿನಿಂದ ಬಿಡುಗಡೆ–ಯಾದ ತುಕ್ಕು ರೋಗಕ್ಕೆ ನಿರೋಧಕತೆ ಮತ್ತು ಇದ್ದಿಲು ಕಾಂಡ ತಾಳುವಿಕೆ ಶಕ್ತಿ ಹೊಂದಿರುವ ಜಿ.ಎಸ್.–23 ತಳಿ, ಆರ್.ಟಿ.ಎಸ್.–43 (ದ್ವಿ ಉಪಯೋಗಿ ತಳಿ,ಅಧಿಕ ಕಾಳಿನ, ಗುಣಮಟ್ಟದ ಮೇವಿನ ಇಳುವರಿ.ಇದ್ದಲು ಕಾಂಡ ಕೊಳೆ, ಸೊರಗು ರೋಗ ಹಾಗೂ ತುಕ್ಕು ರೋಗ ನಿರೋಧಕ ಶಕ್ತಿ ಹೊಂದಿದೆ) ತಳಿಗಳನ್ನು ಸೆಪ್ಟೆಂಬರ್ 15 ರಿಂದ ಅಕ್ಟೋಬರ್ 15ರ ವರೆಗೆ ಬಿತ್ತನೆಗೆ ಉಪಯೋಗಿಸಬಹುದು.

ಕಡಲೆಯು ಹಿಂಗಾರು ಹಂಗಾಮಿನ ಪ್ರಮುಖ ದ್ವಿದಳ ಧಾನ್ಯ ಬೆಳೆಯಾಗಿದ್ದು, ಸೂಕ್ತ ಉಳಿಕೆ ತೇವಾಂಶವಿರುವ ಮಧ್ಯಮ ಹಾಗೂ ಆಳವಾದ ಕಪ್ಪು ಮಣ್ಣಿನಲ್ಲಿ ಉತ್ತಮ ಆಯ್ಕೆಯಾಗಬಹುದು ಕಡಲೆಯಲ್ಲಿ ಸುಧಾರಿತ ತಳಿಗಳಾದ ಜೆ.ಜಿ.–11, ಬಿ.ಜಿ.ಡಿ–103 (ದಪ್ಪ ಕಾಳಿನ ದೇಸಿ ತಳಿ), ಬಿ.ಜಿ.ಡಿ.–ಖಟ1/1, (ಬರ ಪ್ರತಿರೋಧ ಹಾಗೂ ಸೊರಗು ರೋಗ ನಿರೋಧಕ ಶಕ್ತಿ) ಕೆ.ಸಿ.ಡಿ–11 (ಸೊರಗು ರೋಗ ನಿರೋಧಕ ಶಕ್ತಿ ಹೊಂದಿರುವ ದೇಸಿ ತಳಿ), ಕೆ.ಸಿ.ಡಿ –134 ( ಮಧ್ಯಮ ಸೊರಗು ರೋಗ ನಿರೋಧಕ ಶಕ್ತಿ ಹಾಗೂ ಅಧಿಕ ಇಳುವರಿ) ತಳಿಗಳನ್ನು ಅಕ್ಟೋಬರ್ ನವೆಂಬರ್ ಅವಧಿಯಲ್ಲಿ ಬಿತ್ತನೆ ಮಾಡಬಹುದು.

ಕುಸುಬೆಯು ಉತ್ತರ ಕರ್ನಾಟಕದ ಒಣಭೂಮಿ ಪ್ರದೇಶಗಳಿಗೆ ಸೂಕ್ತವಾದ ಪ್ರಮುಖ ಎಣ್ಣೆಕಾಳು ಬೆಳೆಯಾಗಿದೆ. ಆಳವಾದ ಕಪ್ಪು ಮಣ್ಣಿನಲ್ಲಿ ಉಳಿದಿರುವ ತೇವಾಂಶವನ್ನು ಬಳಸಿಕೊಳ್ಳುವ ಸಾಮರ್ಥ್ಯ ಹೊಂದಿದ್ದರೂ, ಉತ್ತಮ ಸ್ಥಾಪನೆಗೆ ಸೂಕ್ತ ಬಿತ್ತನೆ ಕಾಲ ಮತ್ತು ಮಣ್ಣಿನ ತೇವಾಂಶ ಅಗತ್ಯ. ಸ್ಥಳೀಯವಾಗಿ ಶಿಫಾರಸು ಮಾಡಲಾದ ಹಾಗೂ ಮಳೆ ಆಧಾರಿತ ಕೃಷಿಗೆ ಸೂಕ್ತವಾದ ತಳಿಗಳನ್ನು ಆಯ್ಕೆ ಮಾಡಬೇಕು. ಕುಸುಬೆಯಲ್ಲಿ ಎ–1, ಐ ಎಸ್ ಎಫ್–764 (ಬರ ನಿರೋಧಕ, ಸೊರಗು ರೋಗ ಹಾಗೂ ಎಲೆ ಚುಕ್ಕೆ ರೋಗಕ್ಕೆ ಮಧ್ಯಮ ನಿರೋಧಕ ಶಕ್ತಿ) ಹಾಗೂ ಎ–2020 (ಬರ ನಿರೋಧಕ, ಹೆಚ್ಚಿನ ದ್ವಿತಿಯ ಕವಲುಗಳು) ತಳಿಗಳನ್ನು ಸೆಪ್ಟಂಬರ 15–ಅಕ್ಟೋಬರ 15 ರವರೆಗೆ ಬಿತ್ತನೆ ಮಾಡಬಹುದು.

ಕೊಪ್ಪಳ ಜಿಲ್ಲೆಯ ಉತ್ತರ–ಪೂರ್ವ ಒಣ ವಲಯಕ್ಕೆ ಅನುಗುಣವಾಗಿ ಸ್ಥಳೀಯವಾಗಿ ಶಿಫಾರಸು ಮಾಡಲಾದ ತಳಿಗಳನ್ನು ಆಯ್ಕೆ ಮಾಡಬೇಕು. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು ಹಾಗೂ ಸ್ಥಳೀಯ ಕೃಷಿ ಇಲಾಖೆಯ ಶಿಫಾರಸುಗಳಿಗೆ ಆದ್ಯತೆ ನೀಡಬೇಕು.

ಪ್ರಸ್ತುತ ಮಳೆ ಕೊರತೆಯ ಪರಿಸ್ಥಿತಿಯಲ್ಲಿ ಹೆಚ್ಚಿನ ಪ್ರದೇಶದಲ್ಲಿ ಬಿತ್ತನೆ ಮಾಡುವುದಕ್ಕಿಂತ, ಬಿತ್ತಿದ ಪ್ರತಿಯೊಂದು ಎಕರೆ ಬೆಳೆಯು ಯಶಸ್ವಿಯಾಗಿ ಬೆಳೆಯಲು ಸೂಕ್ತ ಪರಿಸ್ಥಿತಿ ಇರುವುದನ್ನು ಖಚಿತಪಡಿಸಿಕೊಳ್ಳುವುದು ಮುಖ್ಯವಾಗಿದೆ. ರೈತರು ಮಣ್ಣಿನ ತೇವಾಂಶವನ್ನು ಸಂರಕ್ಷಿಸಿ, ತಮ್ಮ ಹೊಲದ ಮಣ್ಣು ಮತ್ತು ನೀರಿನ ಲಭ್ಯತೆಗೆ ಹೊಂದುವ ಬೆಳೆಗಳನ್ನು ಆಯ್ಕೆ ಮಾಡಿಕೊಂಡು, ಅನಗತ್ಯ ವೆಚ್ಚವನ್ನು ಕಡಿಮೆ ಮಾಡಬೇಕು.

ಬರ ನಿರೋಧಕತೆ ಹೆಚ್ಚಿಸಲು ಬಿತ್ತನೆ ಪೂರ್ವದಲ್ಲಿ ಶೇ.2 ರ ಕ್ಯಾಲ್ಸಿಯಂ ಕ್ಲೋ–ರೈಡ್ ದ್ರಾವಣದಲ್ಲಿ ನೆನಸಿ (ಜೋಳ:8 ತಾಸು, ಕುಸುಬೆ:12 ತಾಸು ಹಾಗೂ ಕಡಲೆ: 1 ತಾಸು ನೆನೆಸಬೇಕು) ನಂತರ ನೆರಳಿನಲ್ಲಿ ಒಣಗಿಸಿ ಬಿತ್ತನೆ ಮಾಡಬಹುದು.

ಬಿತ್ತನೆ ಪೂರ್ವದಲ್ಲಿ ಏಕದಳ ಧಾನ್ಯ ಬೆಳೆಗಳಿಗೆ ಅಜೋಸ್ಪಿರಿಲಂ, ದ್ವಿದಳ ಧಾನ್ಯ ಬೆಳೆಗಳಿಗೆ ರೈಜೋಬಿಯಂ ಮತ್ತು ಎಲ್ಲಾ ಬೆಳೆಗಳಿಗೆ ಪಿ ಎಸ್ ಬಿ ಜೈವಿಕ ಗೊಬ್ಬರಗಳಿಂದ ಹಾಗೂ ಟ್ರೈಕೋಡರ್ಮಾ ಜೈವಿಕ ಶಿಲೀಂಧ್ರ ನಾಶಕದಿಂದ (4 ಗ್ರಾಂ ಪ್ರತಿ ಕೆ ಜಿ ಬೀಜಕ್ಕೆ) ಉಪಚರಿಸಿ ಬಿತ್ತನೆ ಮಾಡುವುದರಿಂದ ಬೆಳೆಗಳಿಗೆ ಆರಂಭಿಕ ಹಂತದಲ್ಲಿ ಬರುವ ರೋಗಗಳನ್ನು ತಡೆಗಟ್ಟಬಹುದು ಹಾಗೂ ಶೇ.25 ರಷ್ಟು ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ಕಡಿಮೆ ಮಾಡಬಹುದು.

ಬಿತ್ತನೆ, ಮರುಬಿತ್ತನೆ ಅಥವಾ ಪರ್ಯಾಯ ಬೆಳೆ ಆಯ್ಕೆ ಮಾಡುವ ಮೊದಲು ರೈತರು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು, ಸಮೀಪದ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದು ಎಂದು ಜಂಟಿ ಕೃಷಿ ನಿರ್ದೇಶಕರ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

# ಸಮಾಜಮುಖಿ ಕಾರ್ಯಗಳಿಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕೊಡುಗೆ ಅನನ್ಯ : ಎನ್ ಟಿ. ತಮ್ಮಣ್ಣ



ಕೂಡ್ಲಿಗಿ, 14– ಸಮಾಜದ ಅಭಿವೃದ್ಧಿ ಹಾಗೂ ಜನರ ಕಲ್ಯಾಣಕ್ಕಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಕೈಗೊಳ್ಳುತ್ತಿರುವ ಸಮಾಜಮುಖಿ ಕಾರ್ಯಗಳು ಶ್ಲಾಗನೀಯವಾಗಿವೆ ಎಂದು ಸಮಾಜ ಸೇವಕ ಎನ್. ಟಿ. ತಮ್ಮಣ್ಣ ಅಭಿಪ್ರಾಯಪಟ್ಟರು. ತಾಲ್ಲೂಕಿನ ಹಾರಕಬಾವಿ ಗ್ರಾಮದ ಚೌಡೇಶ್ವರಿ ಸಮುದಾಯ ಭವನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿರುದ್ಧಿ ಯೋಜನೆಯ ಕೊಟ್ಟೂರು ಕಾರ್ಯಕ್ಷೇತ್ರ ನಿಂಬಳಗೇರಿ ವಲಯದಿಂದ ಹಮ್ಮಿಕೊಂಡಿದ್ದ ಸಾಮೂಹಿಕ ಸತ್ಯನಾರಾಯಣ ಪೂಜಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಯೋಜನೆಯ ವಿವಿಧ ಜನಪರ ಕಾರ್ಯಕ್ರಮಗಳನ್ನು ಸ್ಮರಿಸಿದ ಅವರು, ಗ್ರಾಮೀಣ ಜನರ ಆರ್ಥಿಕ, ಸಾಮಾಜಿಕ ಅಭಿವೃದ್ಧಿಗೆ ಯೋಜನೆಗೆ ಮಹತ್ವದ ಕೊಡುಗೆ ನೀಡುತ್ತಿದೆ ಎಂದರು. ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆಯವರ ಸಮಾಜಮುಖಿ ಸೇವಕಾರ್ಯಗಳು ಸಮಾಜದ ಅಭಿವೃದ್ಧಿಗೆ ಪೂರಕವಾಗಿವೆ ಎಂದು ಹೇಳಿದರು. ಕಾರ್ಯಕ್ರಮದ ದಿವ್ಯಸಾನಿಧ್ಯವನ್ನು ಕೊಟ್ಟೂರಿನ ಶ್ರೀ ಯೋಗಿರಾಜೇಂದ್ರ ಶಿವಾಚಾರ್ಯ ಸ್ವಾಮೀಜಿ ವಹಿಸಿದ್ದರು.

ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಗುಂಡುಮುಣುಗು ತಿಪ್ಪೇಸ್ವಾಮಿ,ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವಿಜಯನಗರ ಜಿಲ್ಲಾ ನಿರ್ದೇಶಕ ಸತೀಶ್ ಶೆಟ್ಟಿ, ತಾ. ಪಂ. ಮಾಜಿ ಸದಸ್ಯ ಎಸ್. ಶೇಖರಪ್ಪ ಅಧ್ಯಕ್ಷತೆ ವಹಿಸಿದ್ದರು.ಗ್ರಾ. ಪಂ. ಮಾಜಿ ಅಧ್ಯಕ್ಷ ಕೋಟಿಲಿಂಗನಗೌಡ,ಮಾಜಿ ಸದಸ್ಯ ಮಹಾಲಿಂಗಪ್ಪ, ಎಸ್. ಕೊಟ್ರೇಶ್,ಸಿದ್ದಲಿಂಗಪ್ಪ, ಕೋಟೇಶ್,ಜನಜಾಗೃತಿ ವೇದಿಕೆ ಸದಸ್ಯ ಎ. ಚನ್ನಬಸಪ್ಪ, ನಿಂಬಳಗೆರೆ ಗಡ್ಡೇರ ರವಿಕುಮಾರ್,ರಾಜೇಂದ್ರಗೌಡ,ಕಲ್ಲೇಶಪ್ಪ,ಈಶ್ವರಗೌಡ ಕಾರ್ಯಕ್ರಮದಲ್ಲಿದ್ದರು.

# ಕೃಷಿಕರು ಮಣ್ಣು ಉಳಿಸಿ ಬೆಳೆಸಬೇಕು : ಕೃಷಿಕ ಘಂಟಿ ರಾಘವೇಂದ್ರ ಶೆಟ್ಟಿ



ಕೂಡ್ಲಿಗಿ, 14– ಬಹುತೇಕರು ರೈತರು ಬೆಳೆ ಬೆಳೆಸಲು ಮಾತ್ರ ಗಮನ ಕೊಡುತ್ತಾರೆ. ಮಣ್ಣಿನ ಜೀವಂತಿಕೆ ಬಗ್ಗೆ ಕಿಂಚಿತ್ತೂ ಚಿಂತಿಸುವುದಿಲ್ಲ. ಆದರೆ ರೈತರ ಅಸಲಿ ಯಶಸ್ಸು ಮಣ್ಣನ್ನು ಉಳಿಸಿ ಬೆಳೆಸುವುದರಲ್ಲಿದೆ ಎಂದು ಸಾವಯವ ಕೃಷಿಕ ಘಂಟಿ ರಾಘವೇಂದ್ರ ಶೆಟ್ಟಿ ಅಭಿಪ್ರಾಯಪಟ್ಟರು.

ಇವರು ಪಟ್ಟಣದ ಹೊರ ವಲಯದ ತಮ್ಮ ಜಮೀನಿನಲ್ಲಿ ಹಸಿರಿನೊಂದಿಗೆ ಮಾತುಕತೆಯ 20 ಕಾರ್ಯಕ್ರಮದ ಆತಿಥ್ಯವಹಿಸಿ ಮಾತನಾಡಿದರು.

ಕೃಷಿಯಲ್ಲಿ ಮಣ್ಣು ಮೂಲಧಾತು. ಅದನ್ನು ನಾವು ನಿರ್ಜೀವಗೊಳಿಸಿದರೆ ಕೃಷಿಯಲ್ಲಿ ಅರ್ಧ ಸೋತಂತೆ. ಹೀಗಾಗಿ ಮೊದಲು ಮಣ್ಣಿನ ಸತ್ವ ಸಂರಕ್ಷಿಸಿ, ಹೆಚ್ಚಿಸಬೇಕು. ಅದಕ್ಕಾಗಿ ಸಾವಯವ, ನೈಸರ್ಗಿಕ, ಸಹಜ ಕೃಷಿ ಹಾದಿ ತುಳಿಯಬೇಕು. ನಾನು ದಶಕಗಳ ಕಾಲ ಇದೇ ಮಾದರಿಯ ಕೃಷಿ ಮಾಡಿದ್ದು, ಈಗಲೂ ಮಾಡುತ್ತಿರುವೆ. ಕೃಷಿ ತ್ಯಾಜ್ಯವನ್ನು ಮುಚ್ಚುಗೆ ಆಗಿ, ಮಣ್ಣಿಗೆ ಗೊಬ್ಬರವಾಗಿ ಪರಿವರ್ತಿಸಿರುವೆ. ಗೋ ಸಹಿತ, ರಹಿತ ಸಾವಯವ ಕೃಷಿ ವಿಧಾನವನ್ನು ಅನುಸರಿಸಿ ಅದರಲ್ಲೂ ಸಫಲತೆ ಕಾಣುತ್ತಿರುವೆ. ಮಣ್ಣು ಆರೋಗ್ಯವಾಗಿದ್ದರೆ ಬೆಳೆಗಳೂ ಆರೋಗ್ಯವಾಗಿರುತ್ತವೆ. ಪಂಚ ತರಂಗಣಿ ಪದ್ಧತಿಯ ಕೃಷಿಯಲ್ಲಿ ಅಳವಡಿಸಿಕೊಂಡಿರುವೆ. ಜಮೀನಿನಲ್ಲಿ ಬೆಳೆ ವೈವಿಧ್ಯತೆ ಇದೆ. ಸುಸ್ಥಿರ ಕೃಷಿಯಿಂದ ಸಮೃದ್ಧವಾಗಿದೆ ಈ ಜಮೀನು ಮತ್ತು ನನ್ನ ಬದುಕು ಅಂದರು.

ಕೃಷಿ ಕಾರ್ಯಕರ್ತ ಮಲ್ಲಿಕಾರ್ಜುನ ಹೊಸಪಾಳ್ಯ ಮಾತನಾಡಿ ಇದೊಂದು ಅನೌಪಚಾರಿಕ ಮಾತುಕತೆ. ಕೃಷಿಕರು ತಮ್ಮ ಅನುಭವಗಳನ್ನು ಹಂಚಿಕೊಳ್ಳಲು, ಕೃಷಿಯ ಗೊಂದಲಗಳನ್ನು ಪರಿಹರಿಸಿಕೊಳ್ಳಲು ಮುಕ್ತವಾಗಿದೆ. ಕೃಷಿಕರೇ ಪರಸ್ಪರ ಸಲಹೆ, ಸಹಕಾರ ಹಾಗೆ ವಿಚಾರ ವಿನಿಮಯದಿಂದ ಸುಸ್ಥಿರ ಅಭಿವೃದ್ಧಿ ಹೊಂದಬೇಕು ಎಂಬುವುದು ಬಳಗದ ಉದ್ದೇಶವೆಂದರು.

ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ಕೊಪ್ಪಳದ ಮುಖ್ಯಸ್ಥರಾದ ಡಾ.ಪಿ.ಆರ್ ಬದರಿ ಪ್ರಸಾದ್ ಮಾತನಾಡಿ ಕೃಷಿಯಲ್ಲಿ ಜನರಿಗೆ ಸಾಕಷ್ಟು ಒಲವು ಇದೆ. ಆದ–ರೆ ಸರಿಯಾದ ಮಾರ್ಗದರ್ಶನ ಸಿಗುತ್ತಿಲ್ಲ. ಅದಕ್ಕಾಗಿ ನಮ್ಮ ಕೇಂದ್ರದಲ್ಲಿ ' ಒಡಲಾಳ' ಎಂಬ ವಿನೂತನ ಕಾರ್ಯಕ್ರಮವನ್ನು ರೈತರಿಗಾಗಿಯೇ ಪ್ರತಿ ತಿಂಗಳು ಆಯೋಜಿಸಿ ಮಾರ್ಗದರ್ಶನ ನೀಡಲಿರುವೆ ಎಂದರು.

ಬೆಳವಲದ ರಾಯಭಾರಿ ಹೆಚ್.ವಿ ಸಜ್ಜನ್ ಮಾತನಾಡಿ ' ಈ ಜಮೀನು ಶ್ಯಾಂಪಲ್ ಪಟ್ಟಿ ತರಹ ಇದ್ದು, ಇಲ್ಲಿನ ಪ್ರಯೋಗಗಳು ಮತ್ತು ಯಶಸ್ಸು ಕೃಷಿಕರಿಗೆ ಸಿದ್ಧ ಮಾದರಿ ಆಗಿದೆ. ಇವರ ಹಾದಿಯಲ್ಲಿ ಸಾಗಿದರೆ ಕೃಷಿಯಲ್ಲಿ ಯಶಸ್ಸು ಕಟ್ಟಿಟ್ಟ ಬುತ್ತಿ ಅಂದರು.

ದಾವಣಗೆರೆಯ ಜಬೀವುಲ್ಲಾ ಬಿದಿರು ಬೆಳೆ ಮತ್ತದರ ಮೌಲ್ಯವರ್ಧನೆ ಕುರಿತು, ಶಶಿಧರ ಗುರೂಜಿ ಕೃಷಿ ಕ್ಷೇತ್ರದ ಸವಾಲಿನ ಬಗ್ಗೆ ಮಾತನಾಡಿದರು.

ಬಾಳಸಾಹೇಬ ಪಾಟೀಲ್, ಹುಲಿಕೇರಿ ಶರಣಪ್ಪ, ಪೂಜಾರಹಳ್ಳಿ ತಿಪ್ಪೇಸ್ವಾಮಿ, ರೂಬಿ ಮಲ್ಲೇಶ್, ದೂಪದಹಳ್ಳಿ ಮಲ್ಲಿಕಾರ್ಜುನ, ಗಜಾಪುರ ವಿಜಯ್, ಅಮ್ಮನಕೇರಿ ನವೀನ್, ಬಸರಕೋಡು ಒಪ್ಪೊತ್ತೇಶ್ವರ, ಆನೇಕಲ್ಲು ನಾಗರಾಜ್, ನಾಗೇಂದ್ರ ಪ್ರಸಾದ್, ನಿವೃತ್ತ ಅಡಿಷನಲ್ ಎಸ್ ಪಿ ಮಂಜುನಾಥ... ತಮ್ಮ ಕೃಷಿ ಅನುಭವಗಳನ್ನು ಹಂಚಿಕೊಂಡರು.

ವಿಜಯನಗರ, ಬಳ್ಳಾರಿ, ಚಿತ್ರದುರ್ಗ, ಕೊಪ್ಪಳ, ಬಿಜಾಪುರ, ದಾವಣಗೆರೆ.. ಜಿಲ್ಲೆಗಳಿಂದ ನೂರಕ್ಕೂ ಹೆಚ್ಚು ರೈತರು ಭಾಗವಹಿಸಿದ್ದರು.

ಸಚಿನ್ ಪಾತ್ರೆ, ಯು.ಎಸ್ ಪ್ರಸನ್ನ, ಬಸಯ್ಯಸ್ವಾಮಿ, ಸಿಎಸ್ ಪುರ ನಾಗೇಶ್ವರ, ಸ್ವರೂಪ್ ಕೊಟ್ಟೂರು, ಬಂಡ್ರಿ ಓಬಳೇಶ, ಬಸವರಾಜ್ ಕನಕಗಿರಿ, ಮಾರ್ಗದಪ್ಪ, ಹರಿಶ್ ಕೋರಿ, ರಾಮ ಪ್ರಸಾದ್, ಕೃಷ್ಣ ಪ್ರಸಾದ್, ದೇವರಾಜ್ ಗೋಮಾಳಿ, ಶ್ರೀ ಪ್ರಕಾಶ್, ಬಿ.ಎಂ ಶ್ರೀನಾಥ್, ಆಶಾ ಎಸ್, ಸೋಮೇಶ್ ಉಪ್ಪಾರ್, ಭರತ್ ಕುಮಾರ್, ಹೆಚ್.ಎಸ್ ಕರ್ಣಂ ಮುಂತಾದವರು ಇದ್ದರು.

# ಗ್ರಾಮೀಣ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ :ಶಾಸಕ ಎಲ್ ಕೃಷ್ಣನಾಯಕ



ವರದಿ :ಡಿ.ಪರಶುರಾಮಪ್ಪ

ಹೂವಿನಹಡಗಲಿ, 14– ಗ್ರಾಮೀಣ ಪ್ರದೇಶದ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಬೇಕು ಎಂದು ಶಾಸಕ ಎಲ್ ಕೃಷ್ಣನಾಯಕ ಅಭಿಮತ ವ್ಯಕ್ತಪಡಿಸಿದರು.

ಪಟ್ಟಣದ ಜಿ ಬಿ ಆರ್ ಕಾಲೇಜಿನ ಹಾನಗಲ್ ಕುಮಾರೇಶ ಸಭಾಂಗಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ (ರಿ) ವತಿಯಿಂದ ಆಯೋಜಿಸಿದ್ದ ಸುಜ್ಞಾನ ನಿಧಿ ಶಿಷ್ಯ ವೇತನ ಮಂಜೂರಾತಿ ವಿತರಣೆ ಸಮಾರಂಭದಲ್ಲಿ

ಅವರು ಮಂಜೂರಾತಿ ಪತ್ರ ವಿತರಿಸಿ ಮಾತನಾಡಿದರು.

ವಿದ್ಯಾರ್ಥಿ ದೆಸೆಯಲ್ಲಿ ನಾನು ಕೂಡ ತೀರಾ ಬಡ ಕುಟುಂಬದಲ್ಲಿ ಬೆಳೆದೆ.ನನ್ನ ತಾಯಿ ಹಾಲು ಮಾರಿ ನನಗೆ ಶಿಕ್ಷಣವನ್ನು ಕೊಡಿಸಿದ್ದರು. ಅನೇಕ ಕುಟುಂಬದಲ್ಲಿ ಇಂದಿಗೂ ಬಡತನವಿದ್ದರೂ ನಿಮ್ಮ ತಂದೆ ತಾಯಿ ಕಷ್ಟಪಟ್ಟು ನಿಮಗೆ ಶಿಕ್ಷಣವನ್ನು ಕೊಡಿಸುತ್ತಿದ್ದಾರೆ ಎಂದರು.

ಗ್ರಾಮೀಣ ಭಾಗದ ಮಕ್ಕಳಿಗೂ ಕೂಡ ಅನೇಕ ಸಂದರ್ಭದಲ್ಲಿ ಶಿಕ್ಷಣ ಕೊಡಿಸುವುದು ಕಷ್ಟಕರವಾಗಿದ್ದರೂ ಧರ್ಮಸ್ಥಳದ ಪೂಜ್ಯ ವೀರೇಂದ್ರ ಹೆಗ್ಗಡೆಯವರು ನಮ್ಮ ತಾಲೂಕಿನ ವ್ಯಾಪ್ತಿಯ ವಿದ್ಯಾರ್ಥಿಗಳಿಗೆ ಆಯಾ ಕೋರ್ಸಗಳಿಗೆ ಅನುಗುಣವಾಗಿ ನಲವತ್ತು ಸಾವಿರದಿಂದ ಐವತ್ತು ಸಾವಿರ ವರೆಗೆ ಶಿಷ್ಯ ವೇತನ ನೀಡುತ್ತಿರುವುದು ಶ್ಲಾಘನೀಯ ಕಾರ್ಯ ಎಂದು ತಿಳಿಸಿದರು.

ಕಲ್ಯಾಣ ಕರ್ನಾಟಕ ಪ್ರಾದೇಶಿಕ ವ್ಯಾಪ್ತಿಯ ಪ್ರಾದೇಶಿಕ ನಿರ್ದೇಶಕರಾದ ಜೆ ಚಂದ್ರಶೇಖರ್ ಅವರು ಮಾತನಾಡಿ ಈ ಒಂದು ಸುಜ್ಞಾನ ನಿಧಿ ಶಿಷ್ಯವೇತನ ನೀಡುವ ಉದ್ದೇಶ ಬಡ ಕುಟುಂಬ ಅಭಿವೃದ್ಧಿ ಪಡಿಸುವ ಉದ್ದೇ ಆಗಿದೆ.

ಮುಂದಿನ ಜೀವನದ ಆಶಾ ಭಾವನೆಗಳಿಗೆ ಸಂಬಂಧಿಸಿದಂತೆ ಸ್ವಸಹಾಯ ಸಂಘದ ಸದಸ್ಯರು ತಮ್ಮ ಮಕ್ಕಳನ್ನು ಉನ್ನತ ವಿದ್ಯಾಭ್ಯಾಸಕ್ಕಾಗಿ ಬೇರೆ ಬೇರೆ ಕಡೆಗಳಲ್ಲಿ ಸಾಲ ಪಡೆದುಕೊಂಡು ಸಮಸ್ಯೆಯನ್ನು ಮಾಡಿಕೊಳ್ಳಬಾರದೆಂದು

ಹೇಳಿದರು.

ಸ್ವಸಹಾಯ ಸಂಘದ ಸದಸ್ಯರ ಹೆಣ್ಣು ಮಕ್ಕಳಿಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕಡೆಯಿಂದ ಸುಜ್ಞಾನ ನಿಧಿ ಶಿಷ್ಯವೇತನ ನೀಡುವ ಕಾರ್ಯಕ್ರಮವನ್ನು ಪೂಜ್ಯರು ಪ್ರತಿ ವರ್ಷ ಲಕ್ಷಗಟ್ಟಲೆ ವಿದ್ಯಾರ್ಥಿನಿಯರಿಗೆ ಈ ಒಂದು ಕಾರ್ಯಕ್ರಮದಡಿಯಲ್ಲಿ ಸಹಾಯಧನವನ್ನು ನೀಡುತ್ತಾ ಬರುತ್ತಿದ್ದಾರೆ.

ಈ ಕಾರ್ಯಕ್ರಮದ ಫಲಾನುಭವಿ ವಿದ್ಯಾರ್ಥಿಗಳು ತಾವು ಪಡೆದುಕೊಂಡ ಶಿಷ್ಯವೇತನದ ಪರಿಣಾಮಕಾರಿಯಾಗಿ ಬಳಕೆ ಮಾಡಿಕೊಂಡು ತನ್ನ ತಂದೆ ತಾಯಿಗಳಿಗೆ ಒಳ್ಳೆಯ ಹೆಸರನ್ನು ತೆಗೆದು–ಕೊಂಡು ಬರುವುದು ಅವರ ಜವಾಬ್ದಾರಿ ಆಗಿದೆ ಎಂದು ಹೇಳಿದರು.

ಜಿಲ್ಲಾ ನಿರ್ದೇಶಕರ ಸತೀಶ್ ಶೆಟ್ಟಿ,ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಸಂತೋಷ್ ಜೈನ್ ಭರತೇಶ್ ಬಸ್ತಿ, ಸುಭಾಷ್ ವರಕನಹಳ್ಳಿ, ಚಂದ್ರಪ್ಪ ತಳಕಲ್

ಪ್ರಾಂಶುಪಾಲ ಎಸ್ ಎಸ್ ಪಾಟೀಲ್ ತಾಲೂಕಿನ ಯೋಜನಾಧಿಕಾರಿ ಮಂಜುನಾಥ್ ಹಾಗೂ ವಲಯದ ಮೇಲ್ವಿಚಾರಕರಾದ ಶಶಿಕುಮಾರ್, ಸವಿತಾ ಸೇವಾ ಪ್ರತಿನಿಧಿಗಳು, ಒಕ್ಕೂಟದ ಪದಾಧಿಕಾರಿಗಳು, ಸ್ವಸಹಾಯ ಸಂಘದ ಸದಸ್ಯರು ಹಾಗೂ ಫಲಾನುಭವಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಶ್ರೀ ಗುರು ರಾಘವೇಂದ್ರಾಯ ನಮಃ ರಾಯರ ಸೇವೆಯೇ ನಮ್ಮ ಸಂಕಲ್ಪ!



ಕೂಡ್ಲಿಗಿ, 14– ರಾಯರ ಸೇವೆಗೆ ಶಾಸಕರ ಸಂಕಲ್ಪದ ಬಲ; ಕೂಡ್ಲಿಗಿಯಲ್ಲಿ ಮಠ ನಿರ್ಮಾಣಕ್ಕೆ ಹೊಸ ಆಶಾಕಿರಣ!

ಶ್ರೀ ಗುರು ರಾಘವೇಂದ್ರ ಸ್ವಾಮಿಗಳ ಮಠ ನಿರ್ಮಾಣ ಸೇವಾ ಸಮಿತಿಯ ಗೌರವಾಧ್ಯಕ್ಷರಾಗಿ ಡಾ. ಶ್ರೀನಿವಾಸ್ ಎನ್.ಟಿ. ಸಮ್ಮತಿ!

ವಿಜಯದಶಮಿಯ ಪವಿತ್ರ ವಿಜಯಯಾತ್ರೆಯ ಶುಭ ಸಂದರ್ಭದಲ್ಲಿ ಕೂಡ್ಲಿಗಿ ಕ್ಷೇತ್ರದ ಜನಪ್ರಿಯ ಶಾಸಕರಾದ ಡಾ. ಶ್ರೀನಿವಾಸ್ ಎನ್.ಟಿ. ಅವರನ್ನು ಶ್ರೀ ಗುರು ರಾಘವೇಂದ್ರ ಮಠ ನಿರ್ಮಾಣ ಸೇವಾ ಸಮಿತಿ (ರಿ.), ಕೂಡ್ಲಿಗಿ ವತಿಯಿಂದ ಗೌರವಾಧ್ಯಕ್ಷರಾಗಿ ಆಹ್ವಾನಿಸಲಾಯಿತು. ಸಮಿತಿಯ ಆಶಯಕ್ಕೆ ಹೃದಯಪೂರ್ವಕವಾಗಿ ಸ್ಪಂದಿಸಿದ ಶಾಸಕರು, ಗೌರವಾಧ್ಯಕ್ಷರಾಗಿ ಸೇವೆ ಸಲ್ಲಿಸಲು ಸಮ್ಮತಿಸಿ, ಮಠ ನಿರ್ಮಾಣದ ಪವಿತ್ರ ಕಾರ್ಯದಲ್ಲಿ ಕೈಜೋಡಿಸುವ ಇಚ್ಛೆ ವ್ಯಕ್ತಪಡಿಸಿದರು.

ಮಂತ್ರಾಲಯದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಶ್ರೀ ಸುಬುದೇಂದ್ರ ತೀರ್ಥ ಶ್ರೀಪಾದಂಗಳವರ ಆಶೀರ್ವಾದದೊಂದಿಗೆ ಶಾಲು, ಮಂತ್ರಾಕ್ಷತೆ ಹಾಗೂ ಪ್ರಸಾದವನ್ನು ಶಾಸಕರಿಗೆ ಸಮರ್ಪಿಸಿ, ಕೂಡ್ಲಿಗಿಯಲ್ಲಿ ರಾಯರ ಮಠ ನಿರ್ಮಾಣದ ಸಂಕಲ್ಪಕ್ಕೆ ಸಹಕಾರ ಕೋರಲಾಯಿತು.

ಶಾಸಕರ ಸಮ್ಮತಿ ಸಮಿತಿಯ ಸದಸ್ಯರಲ್ಲಿ ಹೊಸ ಉತ್ಸಾಹ ತುಂಬಿದ್ದು, ಭಕ್ತಿ, ಧರ್ಮ ಮತ್ತು ಸೇವೆಯ ಈ ಮಹತ್ಕಾರ್ಯಕ್ಕೆ ಆನೆಬಲ ದೊರೆತಂತಾಗಿದೆ. ರಾಯರ ಕೃಪೆ, ಭಕ್ತರ ಸಂಕಲ್ಪ ಮತ್ತು ಶಾಸಕರ ಸಹಕಾರದೊಂದಿಗೆ ಕೂಡ್ಲಿಗಿಯಲ್ಲಿ ಮಠ ನಿರ್ಮಾಣದ ಕನಸು ನನಸಾಗಲಿ ಎಂಬುದು ಸರ್ವರ ಆಶಯ.

ಈ ಸಂದರ್ಭದಲ್ಲಿ ಸಮಿತಿಯ ಅಧ್ಯಕ್ಷರಾದ ಬಿ.ಆರ್. ಶ್ರೀನಿವಾಸ್ ಶೆಟ್ಟಿ ಅವರ ನೇತೃತ್ವದಲ್ಲಿ ವಿರುಪಾಕ್ಷಮೂರ್ತಿ, ರಂಗನಾಥ, ಸೋಮನಗೌಡರು, ಜಿ. ಶ್ರೀನಿವಾಸ್, ಅಶೋಕ್ ಬಾಬುರಾವ್, ವಿವೇಕಾನಂದ, ಉಮೇಶ್, ನವೀನ್ ಕುಮಾರ್, ಭೀಮರಾಜ್, ಶ್ರೀನಿವಾಸ್, ವೆಂಕಟೇಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಅ.24ರಂದು ಹಂಪಿಗೆ ಯುನೆಸ್ಕೊ ತಂಡ ಭೇಟಿ

## ಐತಿಹಾಸಿಕಸ್ಮಾರಕಗಳಸಂರಕ್ಷಣೆ,ನಿರ್ವಹಣೆಪರಿಶೀಲನೆಗೆಆದ್ಯತೆ:ಡಿಸಿ



ಹೊಸಪೇಟೆ, 14– ವಿಶ್ವವಿಖ್ಯಾತ ಹಂಪಿಯ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ, ನಿರ್ವಹಣೆ ಹಾಗೂ ವಿಶ್ವ ಪಾರಂಪರಿಕ ತಾಣದ ಮಾರ್ಗಸೂಚಿಗಳ ಪಾಲನೆ ಕುರಿತು ಪರಿಶೀಲನೆ ನಡೆಸಲು ಯುನೆಸ್ಕೊ (ಗಓಇಖಅಔ) ತಜ್ಞರ ತಂಡವು ಅಕ್ಟೋಬರ್ 24ರಂದು ಹಂಪಿಗೆ ಭೇಟಿ ನೀಡಲಿದೆ ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಯುನೆಸ್ಕೊ ತಂಡವು ಅಕ್ಟೋಬರ್ 22ರಂದು ದೆಹಲಿಗೆ ಆಗಮಿಸಲಿದ್ದು, ಅಕ್ಟೋಬರ್ 24ರಂದು ಹಂಪಿಗೆ ಭೇಟಿ ನೀಡಲಿದೆ. ಅಕ್ಟೋಬರ್ 27ರವರೆಗೆ ಹಂಪಿ ಹಾಗೂ ಸುತ್ತಮುತ್ತಲಿನ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಿದೆ ಎಂದು ಮಾಹಿತಿ ನೀಡಿದರು.

ಅಂತರರಾಷ್ಟ್ರೀಯ ಪಾರಂಪರಿಕ ತಜ್ಞರಾದ (ಇಂಟರ್ನ್ಯಾಷನಲ್ ಹೆರಿಟೇಜ್ ಎಕ್ಸ್‌ಪರ್ಟ್) ಜಾರ್ಜ್ ಅಬುಂಗ್, ಇಚಿಟ ಶಿಮೊಡ ಹಾಗೂ ವಿಶ್ವ ಪಾರಂಪರಿಕ ತಾಣ ಹೆಚ್ಚುವರಿ ಮಹಾನಿರ್ದೇಶಕಿ ಜಾನ್ವಿ ಶರ್ಮಾ ಅವರನ್ನೊಳಗೊಂಡ ತಂಡವು ಹಂಪಿಯ ಐತಿಹಾಸಿಕ ಸ್ಮಾರಕಗಳು, ದೇವಾಲಯಗಳು ಹಾಗೂ ಪ್ರಾಚೀನ ಅವಶೇಷಗಳ ಸಂರಕ್ಷಣೆಯ ಸ್ಥಿತಿಗತಿಗಳನ್ನು ಅವಲೋಕಿಸಲಿದೆ ಎಂದರು.

ವಿಜಯನಗರ ಸಾಮ್ರಾಜ್ಯದ ಭವ್ಯ ಇತಿಹಾಸ, ವಾಸ್ತುಶಿಲ್ಪದ ವೈಭವ ಹಾಗೂ ಅಪಾರ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಹಂಪಿಯ ಸಂರಕ್ಷಣೆಯ ದೃಷ್ಟಿಯಿಂದ ಈ ಭೇಟಿ ಮಹತ್ವ ಪಡೆದುಕೊಂಡಿದೆ. ಸ್ಮಾರಕಗಳ ನಿರ್ವಹಣೆ, ವಿಶ್ವ ಪಾರಂಪರಿಕ ತಾಣದ ನಿಯಮಗಳ ಪಾಲನೆ ಹಾಗೂ ಪಾರಂಪರಿಕ ತಾಣದ ಸಂರಕ್ಷಣೆಗೆ ಸಂಬಂಧಿಸಿದ ವಿವಿಧ ಅಂಶಗಳ ಪರಿಶೀಲನೆಗೆ ಈ ಭೇಟಿ ಸಹಕಾರಿಯಾಗಲಿದೆ.

ಹಂಪಿಯ ಐತಿಹಾಸಿಕ ಮಹತ್ವಕ್ಕೆ ಧಕ್ಕೆಯಾಗದಂತೆ ಪ್ರವಾಸೋದ್ಯಮ ಅಭಿವೃದ್ಧಿಪಡಿಸುವುದು, ಪ್ರಾಚೀನ ಸ್ಮಾರಕಗಳನ್ನು ಮುಂದಿನ ಪೀಳಿಗೆಗೆ ಉಳಿಸುವುದು ಹಾಗೂ ಪಾರಂಪರಿಕ ತಾಣದ ನಿರ್ವಹಣೆಯನ್ನು ಸುಧಾರಿಸುವ ನಿಟ್ಟಿನಲ್ಲಿ ತಂಡದ ಪರಿಶೀಲನೆ ಮಹತ್ವದ್ದಾಗಿದೆ. ತಂಡದ ಭೇಟಿ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಅಗತ್ಯ ಸಿದ್ಧತೆಗಳನ್ನು ಕೈಗೊಂಡಿದೆ.

ಬೇಸಿಗೆ ಎದುರಿಸಲು ಜಿಲ್ಲಾಡಳಿತ ಸನ್ನದ್ಧ: ಮುಂಬರುವ ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಈ ಸಂಬಂಧ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಆಪತ್ಕಾಲೀನ ಯೋಜನೆ (ಕಂಟಿಜೆನ್ಸಿ ಪ್ಲಾನ್) ಸಿದ್ಧಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಬೇಸಿಗೆಯಲ್ಲಿ ಕೊಳವೆಬಾವಿಗಳಲ್ಲಿ ನೀರಿನ ಲಭ್ಯತೆ ಕಡಿಮೆಯಾಗುವ ಪ್ರದೇಶಗಳಲ್ಲಿ ಅಗತ್ಯಕ್ಕೆ ಅನುಗುಣವಾಗಿ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಪೂರೈಸಲು ಕ್ರಮ ಕೈಗೊಳ್ಳಲಾಗುವುದು. ಈ ನಿಟ್ಟಿನಲ್ಲಿ ಸ್ಥಳೀಯ ಆಡಳಿತ ಸಂಸ್ಥೆಗಳ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಅಧಿಕಾರಿಗಳು ಸಲ್ಲಿಸುವ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಅಗತ್ಯ ಅನುಮೋದನೆ ನೀಡಲಾಗುವುದು ಎಂದು ಹೇಳಿದರು.

ರೈತರಿಗೆ ಅಗತ್ಯ ಮಾರ್ಗದರ್ಶನ: ಬೇಸಿಗೆ ಹಿನ್ನೆಲೆಯಲ್ಲಿ ಕೃಷಿ ಚಟುವಟಿಕೆಗಳಲ್ಲಿಯೂ ಮುನ್ನೆಚ್ಚರಿಕೆ ವಹಿಸಲಾಗುವುದು. ರೈತ ಸಂಪರ್ಕ ಕೇಂದ್ರಗಳನ್ನು ಸಕ್ರಿಯಗೊಳಿಸಿ, ಮುಂದಿನ ದಿನಗಳಲ್ಲಿ ರೈತರಿಗೆ ಸೂಕ್ತ ಬೆಳೆಗಳ ಆಯ್ಕೆ ಹಾಗೂ ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಅಗತ್ಯ ಮಾರ್ಗದರ್ಶನ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಹಂಪಿ ಅಭಿವೃದ್ಧಿ ಪ್ರಾಧಿಕಾರ ಆಯುಕ್ತ ಇ. ಬಾಲಕೃಷ್ಣಪ್ಪ ಇದ್ದರು.

# ಬೀರಬ್ಬಿ :ವಿದ್ಯುತ್ ಸ್ಪರ್ಶದಿಂದ 2 ಎಕರೆ ಕಬ್ಬಿನ ಬೆಳೆ ನಾಶ



ಹೂವಿನಹಡಗಲಿ, 14– ತಾಲೂಕಿನ ಬೀರಬ್ಬಿ ಗ್ರಾಮದ ಚಾಂದ್ ಖಾನ್ ಜಮೀರ್ ಭಾಷಾ ತಂದೆ ಮಾಬುಸಾಬ್ ಇವರ ಜಮೀನಿನ ಸರ್ವೆ ನಂಬರ್ 182 ಬಿ2 ಎರಡು ಎಕರೆ 19 ಸೆಂಟ್ಸ್ ಭೂಮಿಯಲ್ಲಿ ಕಬ್ಬು ಸಂಪೂರ್ಣವಾಗಿ ಬೆಳೆಯಲಾಗಿತ್ತು. ಕಬ್ಬು ಕಟಾವು ಹಂತದಲ್ಲಿದ್ದಾಗ ಅಕ್ಟೋಬರ್ 13 ಮಂಗಳವಾರದಂದು ವಿದ್ಯುತ್ ಟಿಸಿ ಕಂಬದಿಂದ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ನಿಂದ ಕಬ್ಬಿನ ಬೆಳೆ ಸಂಪೂರ್ಣ ಸುಟ್ಟು ಹೋಗಿದೆ.

ಸ್ಥಳಕ್ಕೆ ಅಗ್ನಿಶಾಮಕ ದಳದವರು ಬಂದು ಬೆಂಕಿ ನಂದಿಸಿದರು. ಸುಮಾರು 7 ಲಕ್ಷ ಮೌಲ್ಯದ ಬೆಳೆ ಹಾನಿಯಾಗಿದೆ ಎಂದು ಜಮೀನಿನ ರೈತ ಚಾಂದ್ ಖಾನ್ ತಮ್ಮ ಸಂಕಟ ತೋಡಿಕೊಂಡರು. ಕಬ್ಬಿನ ಬೆಳೆ ವಿದ್ಯುತ್ ಸ್ಪರ್ಶದಿಂದ ಸುಟ್ಟು ಬಸ್ಮವಾಗಿದ್ದು, ಅಪಾರ ಪ್ರಮಾಣದ ನಷ್ಟವಾಗಿದೆ. ಬರಗಾಲದಲ್ಲಿಯೂ ಉತ್ತಮವಾಗಿ ಕಬ್ಬು ಬೆಳೆಯಲಾಗಿತ್ತು. ಇನ್ನೇನು ಕಟಾವು ಮಾಡುವ ಹಂತದಲ್ಲಿರುವಾಗ ಜಮೀನಿನ ಮಧ್ಯೆ ಹಾದುಹೋಗಿರುವ ವಿದ್ಯುತ್ ತಂತಿಗಳು ಗಾಳಿಗೆ ಅಲುಗಾಡಿ ಜೋತುಬಿದ್ದು ಆಳೆತ್ತರಕ್ಕೆ ಬೆಳೆದ ಕಬ್ಬಿನ ಬೆಳೆಗೆ ವಿದ್ಯುತ್ ತಂತಿ ಸ್ಪರ್ಶಗೊಂಡು ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡು ಕಬ್ಬಿನ ಬೆಳೆ ನಾಶವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಸ್ಥಳ ಪರಿಶೀಲಿಸಿದರು. ಬೆಳೆ ನಷ್ಟಕ್ಕೆ ಪರಿಹಾರಕ್ಕಾಗಿ ರೈತರು ಆಗ್ರಹಿಸಿದರು.

# ಶ್ರೀ ಅಭಯ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ನಾಲ್ಕನೇ ದಿನ ಮಹಾಚಂಡಿದೇವಿ ಅಲಂಕಾರ



ಬಳ್ಳಾರಿ, 14– ನಗರದ ವಿದ್ಯಾನಗರದಲ್ಲಿರುವ ಶ್ರೀ ಅಭಯ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ದಸರಾ ಶರನ್ನವರಾತ್ರಿ ಉತ್ಸವದ ಅಂಗವಾಗಿ ನಾಲ್ಕನೇ ದಿನವಾದ ಇಂದು ಶ್ರೀ ಮಹಾಚಂಡಿದೇವಿ ಅಮ್ಮನವರಿಗೆ ವಿಶೇಷ ಅಲಂಕಾರ ನೆರವೇರಿಸಲಾಯಿತು.

ನವರಾತ್ರಿ ಅಂಗವಾಗಿ ದೇವಸ್ಥಾನದಲ್ಲಿ ಪ್ರತಿದಿನವೂ ದೇವಿಯ ವಿವಿಧ ಅಲಂಕಾರಗಳೊಂದಿಗೆ ವಿಶೇಷ ಪೂಜೆ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಭಕ್ತರು ದೇವಿಯ ದರ್ಶನ ಪಡೆದು ಪೂಜೆ ಸಲ್ಲಿಸಿ, ನಾಡಿನ ಸುಖ–ಶಾಂತಿ, ಸಮೃದ್ಧಿ ಹಾಗೂ ಮಳೆ–ಬೆಳೆ ಸಮೃದ್ಧಿಗಾಗಿ ಪ್ರಾರ್ಥಿಸಿದರು.

ಶ್ರೀ ಅಭಯ ಆಂಜನೇಯಸ್ವಾಮಿ ಸೇವಾ ಟ್ರಸ್ಟ್ ವತಿಯಿಂದ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

# ನಾಗತಿಬಸಾಪುರ ಶ್ರೀ ಸಾಯಿ ಸನ್ನಿಧಿಯ ಏಳನೇ ವಾರ್ಷಿಕೋತ್ಸವ




ವರದಿ :ಡಿ.ಪರಶುರಾಮಪ್ಪ

ಹೂವಿನಹಡಗಲಿ, 14– ತಾಲೂಕಿನ ನಾಗತಿ ಬಸಾಪುರ ಗ್ರಾಮದಲ್ಲಿ ಶ್ರೀ ಸಾಯಿ ಸನ್ನಿಧಿಯ 7 ನೇ ವರ್ಷದ ವಾರ್ಷಿಕೋತ್ಸವ

ಅಕ್ಟೋಬರ್ 15 ಗುರುವಾರ ನಡೆಯಲಿದೆ.

ಗುರುವಾರ ಪರಾಭವ ಸಂವತ್ಸರ ಅಶ್ವೀನ ಶುಕ್ಲ ಲಲಿತಾಪಂಚಮಿ ಶುಭದಿನ ಬೆಳಿಗ್ಗೆ 5.30 ಕ್ಕೆ ಕಾಕಡಾರತಿ 6 ಕ್ಕೆ ಶ್ರೀ ಸಾಯಿಬಾಬಾ ಸ್ವಾಮಿಗೆ ಅಭಿಷೇಕ ಅಲಂಕಾರ 7 ಗಂಟೆಗೆ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ 8.30 ಕ್ಕೆ ಗೋಪೂಜೆ 9 ಗಂಟೆಗೆ ಶ್ರೀ ಹನುಮಾನ್ ಚಾಲೀಸಾ ಪಠಣ 10 ಕ್ಕೆ ಶ್ರೀ ಸಾಯಿ ಸ್ವಚ್ಚರಿತ್ರೆ ಸಾಮೂಹಿಕ ಪಾರಾಯಣ 12 ಕ್ಕೆ ಮಧ್ಯಾಹ್ನದ ಆರತಿ 1 ಗಂಟೆಗೆ ಮಹಾಪ್ರಸಾದ 3 ಕ್ಕೆ ಶ್ರೀ ಲಲಿತಸಹಸ್ರನಾಮ ಪಾರಾಯಣ ಸಂಜೆ 4 ಗಂಟೆಗೆ ಶ್ರೀ ಸಾಯಿ ಬಾಬಾ ಅವರ ಪಲ್ಲಕ್ಕಿ ಉತ್ಸವ ಗ್ರಾಮ ಪ್ರದಕ್ಷಿಣೆ 6 ಗಂಟೆಗೆ ಧೂಪಾರತಿ 7 ಕ್ಕೆ ಸಾಯಿ ಸತ್ಸಂಗ ಉದ್ಘಾಟನೆ9 ಗಂಟೆಗೆ ಶೇಜಾರತಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.

ಭಕ್ತಾದಿಗಳು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀ ಸಾಯಿ ಬಾಬಾ ಕೃಪೆಗೆ ಪಾತ್ರರಾಗಲು ಶ್ರೀ ಸಾಯಿ ಟ್ರಸ್ಟ್ ನ ಸಂಚಾಲಕ ಪತ್ರಕರ್ತ ಎಂ ನಿಂಗಪ್ಪ ಕೋರಿದ್ದಾರೆ.

# ಯುವ ಸಂಸತ್ ಸಭೆಯಲ್ಲಿ ನ್ಯಾ.ರಾಜೇಶ್ ಎನ್ ಹೊಸಮನೆ ಕರೆ

## ಪ್ರಜಾಪ್ರಭುತ್ವದ ಮೌಲ್ಯ ಉಳಿಸಲು ಆರೋಗ್ಯಕರ ಚರ್ಚೆಗಳು ಅತ್ಯಗತ್ಯ



ಬಳ್ಳಾರಿ,14– ಪ್ರಜಾಪ್ರಭುತ್ವದ ನಿಜವಾದ ಶಕ್ತಿ ಸಾರ್ಥಕ ಹಾಗೂ ಅರ್ಥಪೂರ್ಣ ಚರ್ಚೆಗಳಲ್ಲಿ ಅಡಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ ಅವರು ಹೇಳಿದರು.

ಬಳ್ಳಾರಿ ತಾಲೂಕು ಆಡಳಿತ, ತಾಲೂಕು ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಉನ್ನತ ಶಿಕ್ಷಣ ಇಲಾಖೆ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ 'ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ' ಅಂಗವಾಗಿ ನಗರದ ನಲ್ಲಚೆರುವು ಬಳಿಯಿರುವ ಡಾ.ಬಾಬು ಜಗಜೀವನ್ ರಾಂ ಭವನದಲ್ಲಿ ಬುಧವಾರ ಆಯೋಜಿಸಿದ್ದ ಬಳ್ಳಾರಿ ತಾಲೂಕು ಮಟ್ಟದ 'ಯುವ ಸಂಸತ್ತು' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ಶಾಸನ ಸಭೆಗಳಲ್ಲಿ ಕೇವಲ ಗದ್ದಲ, ವಿರೋಧಕ್ಕಾಗಿಯೇ ವಿರೋಧ ವ್ಯಕ್ತವಾಗುತ್ತಿರುವುದಕ್ಕೆ ಬೇಸರ ವ್ಯಕ್ತಪಡಿಸಿದ ಅವರು, ಯುವಜನತೆ ಸಂವಿಧಾನದ ಮೌಲ್ಯಗಳನ್ನು ಅರಿತು ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಬೇಕೆಂದು ಕರೆ ನೀಡಿದರು.

ಕೇವಲ ಗದ್ದಲ ಎಬ್ಬಿಸುವುದಕ್ಕಿಂತ ವಿಷಯಾಧಾರಿತ, ರಚನಾತ್ಮಕ ಚರ್ಚೆಗಳು ನಡೆಯುವುದು ಪ್ರಜಾಪ್ರಭುತ್ವಕ್ಕೆ ಅಗತ್ಯ. ಸಂಸತ್ತು ಮತ್ತು ವಿಧಾನಸಭೆಗಳಲ್ಲಿ ಕಾನೂನು ರೂಪಿಸುವ ಮುನ್ನ ಸಾಧಕ–ಬಾಧಕಗಳ ಕುರಿತು ಆಳವಾದ ಚರ್ಚೆ ನಡೆಯಬೇಕು. ಎದುರಾಳಿ ಅಥವಾ ವಿರೋಧ ಪಕ್ಷಗಳ ಅಭಿಪ್ರಾಯಗಳಿಗೆ ಗೌರವ ನೀಡುವ 'ಒಪ್ಪಂದದ ಭಿನ್ನಾಭಿಪ್ರಾಯ' ಸಂಸ್ಕೃತಿ ಇರಬೇಕು. ಕೇವಲ ಪರಸ್ಪರ ದ್ವೇಷ ಸಾಧಿಸುವುದು ಸರಿಯಲ್ಲ ಎಂದು ನುಡಿದರು.

ಡಾ. ಬಿ.ಆರ್. ಅಂಬೇಡ್ಕರ್ ಅವರು ರಚಿಸಿದ ಸಂವಿಧಾನವು ಇಡೀ ಜಗತ್ತಿಗೆ ಮಾದರಿಯಾಗಿದೆ. ಸಂವಿಧಾನವೇ ದೇಶದ ಸರ್ವ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ಮಾರ್ಗದರ್ಶಿಯಾಗಿದೆ ಎಂದು ಸ್ಮರಿಸಿದ ಅವರು, ಸಾರ್ವಜನಿಕವಾಗಿ ನಿಂತು ಮಾತನಾಡುವ ಕಲೆ ಯುವಜನರಲ್ಲಿ ನಾಯಕತ್ವ ಗುಣ ಹಾಗೂ ಧೈರ್ಯವನ್ನು ಬೆಳೆಸುತ್ತದೆ.

ಇಂತಹ ಯುವ ಸಂಸತ್ ಕಾರ್ಯಕ್ರಮಗಳು ಯುವಕರಲ್ಲಿ ಪ್ರಜಾಸತ್ತಾತ್ಮಕ ಚಿಂತನೆ ಬೆಳೆಸಲು ಪ್ರೇರಕವಾಗಿವೆ ಎಂದು ಪ್ರಶಂಶಿಸಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ರಾಮಬ್ರಹ್ಮಂ ಅವರು ಮಾತನಾಡಿ, ಪ್ರಜಾಪ್ರಭುತ್ವ ಎಂದರೆ ಕೇವಲ ಮತದಾನ ಮಾಡುವುದು ಅಥವಾ ಆಡಳಿತ ವ್ಯವಸ್ಥೆಯಲ್ಲ, ಅದು ಪ್ರತಿಯೊಬ್ಬರ ಜೀವನ ವಿಧಾನ ಮತ್ತು ಜೀವನದ ಅವಿಭಾಜ್ಯ ಅಂಗವಾಗಿದೆ ಎಂದು ಹೇಳಿದರು.

2007ರಲ್ಲಿ ವಿಶ್ವಸಂಸ್ಥೆಯು ಸೆಪ್ಟೆಂಬರ್ 15 ಅನ್ನು 'ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನ' ಎಂದು ಘೋಷಿಸಿತು. 2008ರಿಂದ ಪ್ರತಿವರ್ಷ ಪ್ರಪಂಚದಾದ್ಯಂತ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯಲು ಹಾಗೂ ಮಾನವ ಹಕ್ಕುಗಳ ರಕ್ಷಣೆಗಾಗಿ ಈ ದಿನವನ್ನು ಆಚರಿಸಿಕೊಂಡು ಬರಲಾಗುತ್ತಿದೆ ಎಂದರು.

ನೈಜ ಸಂಸತ್ತಿನ ಮಾದರಿಯಲ್ಲಿ ವಿದ್ಯಾರ್ಥಿಗಳಿಂದ ಗಮನಾರ್ಹ ಚರ್ಚೆ: ಅಣಕು ಸಂಸತ್ತು ಸಭೆಯಲ್ಲಿ ವಿದ್ಯಾರ್ಥಿಗಳು ಅತ್ಯಂತ ಉತ್ಸಾಹದಿಂದ ಪಾಲ್ಗೊಂಡು ನೈಜ ಸಂಸತ್ತಿನ ಕಾರ್ಯಕಲಾಪಗಳನ್ನು ಮರುಸೃಷ್ಟಿಸಿದರು.

ಕಾರ್ಯಕ್ರಮದಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳ ಪಾತ್ರ ವಹಿಸಿದ್ದ ವಿದ್ಯಾರ್ಥಿಗಳು ಪ್ರಸ್ತುತ ಸಮಾಜದ ಪ್ರಮುಖ ವಿಷಯಗಳಾದ ಶಿಕ್ಷಣ, ಆರೋಗ್ಯ, ಯುವಜನರ ಉದ್ಯೋಗ, ಪರಿಸರ ಸಂರಕ್ಷಣೆ ಹಾಗೂ ಗ್ರಾಮೀಣ ಅಭಿವೃದ್ಧಿಯಂತಹ ಗಂಭೀರ ವಿಚಾರಗಳ ಕುರಿತು ವಾಸ್ತವಿಕ ಸಂಸತ್ತಿನ ಶೈಲಿಯಲ್ಲೇ ತಾರ್ಕಿಕ ಚರ್ಚೆ ನಡೆಸಿದರು.

ವಿಶೇಷವಾಗಿ ಪ್ರಶ್ನೋತ್ತರ ಕಲಾಪ, ಶೂನ್ಯ ವೇಳೆ ಹಾಗೂ ನೂತನ ವಿಧೇಯಕಗಳ ಮಂಡನೆ ಪ್ರಕ್ರಿಯೆಗಳು ನೆರೆದಿದ್ದ ವೀಕ್ಷಕರ ಮತ್ತು ಗಣ್ಯರ ಮೆಚ್ಚುಗೆಗೆ ಪಾತ್ರವಾದವು. ಸ್ಪರ್ಧೆಯ ಅಂತ್ಯದಲ್ಲಿ ಅತ್ಯುತ್ತಮ ವಾಗ್ಮಿತ್ವ ಹಾಗೂ ಸಂಸದೀಯ ಕೌಶಲ್ಯ ಪ್ರದರ್ಶಿಸಿದ ವಿದ್ಯಾರ್ಥಿಗಳನ್ನು ಜಿಲ್ಲಾ ಮಟ್ಟದ ಯುವ ಸಂಸತ್ತು ಸಭೆಗೆ ಆಯ್ಕೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಶಾಹೇಕಾ ಅಹಮದಿ, ಬಳ್ಳಾರಿ ತಾಲೂಕು ಗ್ರೇಡ್–2 ತಹಶೀಲ್ದಾರರಾದ ಸುಧಾ ಅರಮನೆ, ಕ್ಷೇತ್ರ ಶಿಕ್ಷಣಾಧಿಕಾರಿ ಬಿ. ಕಸ್ತೂರಿ ಅವರು, ತಾಲೂಕು ಪಂಚಾಯತಿಯ ಸಹಾಯಕ ನಿರ್ದೇಶಕಿ ಸಂಧ್ಯಾ, ಸಸಅ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಹೊನ್ನುರಾಲಿ, ಸರ್ಕಾರಿ (ಮಾ.ಪು) ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ನಾಗರೆಡ್ಡಿ ಕೆ.ವಿ., ಸರ್ಕಾರಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಸತೀಶ್ ಹಿರೇಮಠ್ ಸೇರಿದಂತೆ ವಿವಿಧ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು, ಶಿಕ್ಷಕರು– ಉಪನ್ಯಾಸಕರು ಹಾಗೂ ಪೋಷಕರು ಉಪಸ್ಥಿತರಿದ್ದರು.

'HOSAPETE NADIMIDITA ' KANNADA DAILY NEWSPAPER PRINTEDE BY RAMJEE NAIK R PUBLISHER AND OWNED BY RAMJEE NAIK R, PRINTED AT HOMBALI PRINTING, 3787/A/6-7C MAHENDRAKAR CIRCLE, GADAG KARNATAKA-582101
PRGI NO: KNKAN/26/A1167 PAGES-4, DATE 01/03/2026. PUBLISHED AT HN,93, KALLAHALLI VILLAGE, HOSPET POST, VIJAYANAGARA, -583201, KARNATAKA STATE, EDITOR:RAMJEE NAIK R, CELL-9448717472.